## ಸಾಹಿತ್ಯ ಸಿಂಚನ

ವಿಪರ್ಯಾಸ.!

ನಗುವಿಗಾಗಿ ಎಷ್ಟೆಷ್ಟೆಲ್ಲಾ
ಸಂಪಾದಿಸುವ ಭ್ರಮೆಗಳಲ್ಲಿ...
ಮನಬಿಚ್ಚಿ ಮೊಗಬಿಚ್ಚಿ
ನಿತ್ಯ ನಗುವುದನ್ನೇ
ಮರೆಯುತ್ತೇವೆ.!

ಬದುಕಿಗಾಗಿ ಏನೇನೆಲ್ಲಾ
ಕಲಿಯುವ ಭರದಲ್ಲಿ
ಬದುಕುವುದ
ಕಲಿಯುವುದನ್ನೇ
ಮರೆಯುತ್ತೇವೆ

ಬೆಳಕಿಗಾಗಿ
ಎಲ್ಲೆಲ್ಲೆಲ್ಲಾ
ಹುಡುಕುವ
ಹುಚ್ಚಿನಲ್ಲಿ
ಒಳಗಣದೀಪ
ಹಚ್ಚುವುದನ್ನೇ
ಮರೆಯುತ್ತೇವೆ.!

ಎ.ಎನ್.ರಮೇಶ್. ಗುಬ್ಬಿ.

# ಲಿಟಲ್ ಚಾಂಪ್ ಶಾಲೆಯಲ್ಲಿ ಕ್ರಿಸ್‌ಮಸ್ ಹಾಗೂ ಈದ್ ಮಿಲಾದ್ ಸಂಯುಕ್ತ ಆಚರಣೆ

❏ ನೈಜ್ಯ ದೆಸೆ ನ್ಯೂಸ್

**ಲಿಟಲ್ ಚಾಂಪ್ ಶಾಲೆಯಲ್ಲಿ ಕ್ರಿಸ್‌ಮಸ್ ಹಾಗೂ ಈದ್ ಮಿಲಾದ್ ಹಬ್ಬಗಳನ್ನು ಸಂಯುಕ್ತವಾಗಿ ಸೌಹಾರ್ದತೆಯಿಂದ ಆಚರಿಸಲಾಯಿತು. ಈ ಕಾರ್ಯಕ್ರಮವು ಎಲ್ಲಾ ಧರ್ಮಗಳ ಏಕತೆ, ಪ್ರೀತಿ ಮತ್ತು ಮಾನವೀಯತೆಯ ಸಂದೇಶವನ್ನು ಮಕ್ಕಳಿಗೆ ಸಾರುವ ಉದ್ದೇಶದಿಂದ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ಗುರುಸಿದ್ದಯ್ಯ ವಸ್ತ್ರದ್ ಅವರು ವಹಿಸಿದ್ದರು.**

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಶ್ರೀ ಮೌಲಾಸಾಬ್ ಅವರು (ಹೆಡ್ ಮಾಸ್ಟರ್, ಉರ್ದು ಶಾಲೆ) ಆಗಮಿಸಿದ್ದರು. ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, "ಈ ಜಗತ್ತಿನಲ್ಲಿ ದೇವರು ಒಬ್ಬನೇ. ನಾವು ಆತನನ್ನು ವಿಭಿನ್ನ ಹೆಸರುಗಳಲ್ಲಿ ಪೂಜಿಸುತ್ತೇವೆ. ಪ್ರತಿ ಧರ್ಮವೂ ಪ್ರೀತಿ, ಶಾಂತಿ ಮತ್ತು ಮಾನವೀಯತೆಯನ್ನೇ ಸಾರುತ್ತದೆ" ಎಂದು ಹೇಳಿದರು. ಇದಕ್ಕೆ ಜೊತೆಯಾಗಿ ಪ್ರವಾದಿ ಮಹಮ್ಮದ್ ಪೈಗಂಬರ್ ಅವರು ಹೇಳಿದಂತೆ ಎಲ್ಲರೂ ಪ್ರತಿಯೊಬ್ಬ ಮಾನವನನ್ನು ಪ್ರೀತಿಸಬೇಕು ಎಂಬ ಸಂದೇಶವನ್ನು ಮಕ್ಕಳಿಗೆ ಮನದಟ್ಟು ಮಾಡಿದರು.





ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಲಾಜರ್ ಸಿರಿಲ್ ಜಿ, ಪ್ರಿನ್ಸಿಪಲ್, ಸನ್‌ರೈಸ್ ಸ್ಕೂಲ್ ಆಫ್ ನರ್ಸಿಂಗ್, ಸಿಂಧನೂರು ಅವರು ಉಪಸ್ಥಿತರಿದ್ದರು. ಅವರು ಮಾತನಾಡುತ್ತಾ, "ಕ್ರಿಸ್‌ಮಸ್ ಹಬ್ಬವು ಸಂತೋಷ, ಹಂಚಿಕೆ ಮತ್ತು ತ್ಯಾಗದ ಹಬ್ಬವಾಗಿದೆ.

ಇತರರಿಗೆ ಕೊಡುವ ಮನಸ್ಸೇ ಕ್ರಿಸ್‌ಮಸ್‌ನ ನಿಜವಾದ ಅರ್ಥ" ಎಂದು ತಿಳಿಸಿದರು. ಅವರು ಮುಂದುವರಿದು ಯೇಸು ಕ್ರಿಸ್ತನ ಕುರಿತು ಮಹಾನ್ ಚಿಂತಕರ ಅಭಿಪ್ರಾಯಗಳನ್ನು ವಿವರಿಸಿದರು. ಸ್ವಾಮಿ ವಿವೇಕಾನಂದರ ಅಭಿಪ್ರಾಯದಲ್ಲಿ ಯೇಸು ಕ್ರಿಸ್ತನು ಪರಮ ತ್ಯಾಗದ ಪ್ರತೀಕ, ಪ್ರೀತಿ ಮತ್ತು ಸೇವೆಯ ಯೋಗಿ, ಸಹನಶೀಲತೆ ಮತ್ತು ಕ್ಷಮೆಯ ಮಾದರಿ ಎಂದು ಹೇಳಿದರು. ಮಹಾತ್ಮ ಗಾಂಧೀಜಿ ಅವರು ಹೇಳಿದಂತೆ ಯೇಸುವಿನ ಜೀವನವೇ ಅಹಿಂಸೆ, ಪ್ರೀತಿ ಮತ್ತು ತ್ಯಾಗದ ಅತ್ಯುತ್ತಮ ಉದಾಹರಣೆ. ಯೇಸು ಶತ್ರುಗಳಿಗೂ ಪ್ರೀತಿ ತೋರಿದ ರೀತಿ ಸತ್ಯ ಮತ್ತು ಅಹಿಂಸೆಯ ಶಕ್ತಿಯಾಗಿದೆ ಎಂದು ಗಾಂಧೀಜಿ ಅಭಿಪ್ರಾಯಪಟ್ಟಿದ್ದಾರೆ.

ರವೀಂದ್ರನಾಥ್ ಟಾಗೂರ್ ಅವರು ಯೇಸುವನ್ನು ಮಾನವೀಯತೆಯ ಮಹಾನ್ ಗುರು ಎಂದು ಕಂಡು, ಯೇಸುವಿನ ಸಂದೇಶವು ಹೃದಯದಿಂದ ಹೃದಯಕ್ಕೆ ಮಾತನಾಡುತ್ತದೆ ಎಂದು ಹೇಳಿದ್ದಾರೆ ಎಂದು ವಿವರಿಸಿದರು. ಇದೇ ಯೇಸು ಕ್ರಿಸ್ತರ ಮಹಾನ್ ಸಂದೇಶ ಎಂದು ಅವರು ತಿಳಿಸಿದರು. ಕಾರ್ಯಕ್ರಮದಲ್ಲಿ ಟಬಸುಮ್ ಮ್ಯಾಡಮ್ ಹಾಗೂ ಶಹನಾಜ್ ಮ್ಯಾಡಮ್ ಉಪಸ್ಥಿತರಿದ್ದರು.

ಶಾಲೆಯ ಪ್ರಾಂಶುಪಾಲರಾದ ಅನಿತಾ ಸಿ.ಎಚ್. ಅವರು ಕಾರ್ಯಕ್ರಮದ ಯಶಸ್ಸಿಗೆ ಸಹಕಾರ ನೀಡಿದರು. ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರಾದ ಇಂದುಪ್ರಿಯಾ, ಪಲಿತಾ, ಮಾನಸಾ, ಸುಮಲತಾ, ಶರಣಮ್ಮ, ರತ್ನಮ್ಮ, ಕಾರ್ತಿಕ್, ಪೂರ್ಣಿಮಾ, ಭಾರ್ಗವಿ, ಆನಂದಿ, ಹರಿಕಾ ಹಾಗೂ ಲಿಂಗಪ್ಪ ಅವರು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಈ ಸಂಯುಕ್ತ ಆಚರಣೆಯ ಮೂಲಕ ವಿದ್ಯಾರ್ಥಿಗಳಿಗೆ ಧರ್ಮಗಳ ನಡುವೆ ಇರುವ ಸೌಹಾರ್ದತೆ, ಪ್ರೀತಿ, ಮಾನವೀಯತೆ ಮತ್ತು ಶಾಂತಿಯ ಮಹತ್ವವನ್ನು ತಿಳಿಸುವಲ್ಲಿ ಕಾರ್ಯಕ್ರಮವು ಅತ್ಯಂತ ಅರ್ಥಪೂರ್ಣವಾಗಿತ್ತು.

## ಹೋಲಿ ಫ್ಯಾಮಿಲಿ ಚರ್ಚ್‌ನಲ್ಲಿ ಕ್ರಿಸ್‌ಮಸ್ ಈವ್ ಪವಿತ್ರ ಮಸ್ಸಾ ಭಕ್ತಿಭಾವದಿಂದ ಆಚರಣೆ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಹೋಲಿ ಫ್ಯಾಮಿಲಿ ಚರ್ಚ್‌ನಲ್ಲಿ ಕ್ರಿಸ್‌ಮಸ್ ಈವ್ ಪವಿತ್ರ ಬಲಿ ಪೂಜೆ ಭಕ್ತಿಭಾವ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ಈ ಪವಿತ್ರ ಮಸ್ಸಾವನ್ನು ರೆವರೆಂಟ್ ಫಾದರ್ ಜ್ಞಾನ ಪ್ರಕಾಶ್ ಅವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಪ್ಯಾರಿಷ್ ಕೌನ್ಸಿಲ್ ಸದಸ್ಯರು, ಚರ್ಚ್ ಸಮಿತಿಯವರು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಪ್ಯಾರಿಷ್ ಸದಸ್ಯರು ಭಾಗವಹಿಸಿದ್ದರು.**



ಪ್ರಸಂಗದಲ್ಲಿ ಫಾದರ್ ಗ್ನಾನ ಪ್ರಕಾಶ್ ಅವರು ಯೇಸು ಕ್ರಿಸ್ತರ ಜನನದ ಮಹತ್ವವನ್ನು ವಿವರಿಸಿ, ಪ್ರೀತಿ, ಶಾಂತಿ, ತ್ಯಾಗ, ಕ್ಷಮೆ ಹಾಗೂ ಸಹೋದರತ್ವದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಕರೆ ನೀಡಿದರು. ಸಮಾಜದಲ್ಲಿ ಶಾಂತಿ, ಏಕತೆ ಮತ್ತು ಮಾನವೀಯತೆಯನ್ನು ಬೆಳೆಸುವಲ್ಲಿ ಕ್ರಿಸ್‌ಮಸ್ ಹಬ್ಬದ ಸಂದೇಶ ಅತ್ಯಂತ ಮಹತ್ವದ್ದೆಂದು ಅವರು ಹೇಳಿದರು. ಪವಿತ್ರ ಬಲಿ ಪೂಜೆ ಸಂದರ್ಭದಲ್ಲಿ ಕ್ರಿಸ್‌ಮಸ್ ಕೀರ್ತನೆಗಳು, ಬೈಬಲ್ ವಾಚನಗಳು ಮತ್ತು ವಿಶೇಷ ಪ್ರಾರ್ಥನೆಗಳು ನೆರವೇರಿದ್ದು, ಚರ್ಚ್ ವಾತಾವರಣವು ಸಂಪೂರ್ಣವಾಗಿ ಆಧ್ಯಾತ್ಮಿಕತೆಯಿಂದ ತುಂಬಿತ್ತು. ಪ್ಯಾರಿಷ್ ಕೌನ್ಸಿಲ್ ಸದಸ್ಯರು ಕಾರ್ಯಕ್ರಮದ ವ್ಯವಸ್ಥೆಯನ್ನು ಸುಗಮವಾಗಿ ನಿರ್ವಹಿಸಿದರು. ಮಸ್ಸಾ ನಂತರ ಪ್ಯಾರಿಷ್ ಸದಸ್ಯರು ಪರಸ್ಪರ ಕ್ರಿಸ್‌ಮಸ್ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು, ಪ್ರೀತಿ ಮತ್ತು ಐಕ್ಯತೆಯ ವಾತಾವರಣವನ್ನು ನಿರ್ಮಿಸಿದರು. ಈ ಕ್ರಿಸ್‌ಮಸ್ ಈವ್ ಆಚರಣೆ ವಿಶ್ವ ಶಾಂತಿ, ಸಮೃದ್ಧಿ ಮತ್ತು ಸೌಹಾರ್ದತೆಯ ಸಂದೇಶವನ್ನು ಸಾರುವ ಮೂಲಕ ಯಶಸ್ವಿಯಾಗಿ ನೆರವೇರಿತು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೇ ಓದಿರಿ.

# ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಆದ್ಯತೆ ನೀಡುತ್ತೇನೆ: ಆರ್. ಬಸನಗೌಡ



❏ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಗ್ರಾಮೀಣ ಭಾಗದಲ್ಲಿರುವ ಸರಕಾರಿ ಶಾಲೆಗಳನ್ನು ಅಭಿವೃದ್ಧಿ ಪಡಿಸುವ ಜತೆಗೆ ಗ್ರಾಮೀಣ ಭಾಗದ ಸರ್ವಾಂಗಿಣ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತದೆ ಎಂದು ಖಾದಿ ಮತ್ತು ಗ್ರಾಮದ್ಯೋಗ ಮಂಡಳಿ ಅಧ್ಯಕ್ಷ ಹಾಗೂ ಶಾಸಕ ಆರ್.ಬಸನಗೌಡ ತುರವಿಹಾಳ ಹೇಳಿದರು.**

ಮಸ್ಕಿ ತಾಲ್ಲೂಕಿನ ಬೆಳ್ಳಿಗಾನೂರು ಗ್ರಾಮದಲ್ಲಿ ಬಸ್ ಶೆಲ್ಟರ್, ಎನ್.ಎನ್ ಕ್ಯಾಂಪಿನ ಸರಕಾರಿ ಶಾಲೆಯಲ್ಲಿ ಭೋಜನಾಲಯ, ಅಂತರಗಂಗಿ ತಾಂಡಾ, ಚಿಕ್ಕದಿನ್ನಿ, ಗೋನವಾರ ಗ್ರಾಮದ ಶಾಲಾ ಕಟ್ಟಡಗಳನ್ನು ಬುಧವಾರ ಉದ್ಘಾಟನೆ ನೇರವೇರಿಸಿ ನಂತರ ಮಾತನಾಡಿದ ಅವರು ಕ್ಷೇತ್ರದ ಪ್ರತಿಯೊಂದು ಗ್ರಾಮಗಳಿಗೂ ಮೂಲಸೌಕರ್ಯಗಳಾದ ರಸ್ತೆ, ಕುಡಿಯುವ ನೀರು, ಚರಂಡಿ ಸೇರಿದಂತೆ ಹಲವಾರು ಸಾರ್ವಜನಿಕ ಸೌಲಭ್ಯಗಳನ್ನು ಕಲ್ಪಿಸಲು ಮೊದಲ ಆದ್ಯತೆ ನೀಡಲಾಗುತ್ತದೆ ಎಂದರು.

ನಾನು ಶಾಸಕನಾದ ನಂತರ ಕ್ಷೇತ್ರದ ಹಲವಾರು ಗ್ರಾಮೀಣ ಭಾಗಕ್ಕೆ ಸಾರಿಗೆ ಇಲಾಖೆ ಬಸ್‌ಗಳ ಸಂಚಾರಕ್ಕೆ ಚಾಲನೆ ನೀಡಲಾಗಿದೆ. ಸಾರಿಗೆ ಬಸ್ ಓಡಾಡುತ್ತಿರುವದರಿಂದ ಜನ ಸಾಮಾನ್ಯರಿಗೆ ಅನುಕೂಲವಾಗಿದೆ. ಅದೇ ರೀತಿಯಾಗಿ ಗ್ರಾಮೀಣ ಭಾಗದ ಮಕ್ಕಳ ಶಿಕ್ಷಣಕ್ಕಾಗಿ ವಸತಿ ಶಾಲೆಗಳನ್ನು ನಿರ್ಮಿಸಲು ಸರ್ಕಾರದ ಮೇಲೆ ಮತ್ತು ಶಿಕ್ಷಣ ಸಚಿವರಿಗೆ ಒತ್ತಡ ಹಾಕಿ ಹೊಸ ವಸತಿ ಶಾಲೆಗಳನ್ನು ಮಂಜೂರು ಮಾಡಿಸಲಾಗುತ್ತದೆ ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ವಿವಿಧ ಘಟಕ ಪದಾಧಿಕಾರಿಗಳು, ಗ್ಯಾರಂಟಿ ಯೋಜನೆ ಪದಾಧಿಕಾರಿಗಳು ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರಿದ್ದರು.

# ರೈತರ ಭದ್ರತೆಯ ಬದುಕಿಗೆ ಸಮಗ್ರ ಅಭಿವೃದ್ಧಿ ಯೋಜನೆ ಅಗತ್ಯ: ಕಲ್ಮಠ ಶ್ರೀ

❏ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಕಲ್ಮಠ ವಿದ್ಯಾಸಂಸ್ಥೆಯಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ರೈತ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಕಲ್ಮಠದ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಾಚನ ನೀಡಿ ರೈತರು ದೇಶದ ಆಹಾರ ಭದ್ರತೆಗೆ ಕಾರಣರಾಗಿದ್ದರು ಕೂಡ ನಮ್ಮ ರೈತರ ಬದುಕು ಆನಂದದಾಯಕವಾಗುವುದಕ್ಕೆ, ರೈತರ ಭದ್ರತೆಗೆ, ರೈತರ ಸಮಗ್ರ ಅಭಿವೃದ್ಧಿಗೆ ಸರ್ಕಾರದಿಂದ ಅಗತ್ಯ ಯೋಜನೆ ರೂಪಿಸುವುದು ಅಗತ್ಯವಿದೆ ಪ್ರತಿ ತುತ್ತಿನ ಹಿಂದೆ ಸಾವಿರಾರು ಜನ ರೈತರ ಶ್ರಮವಿದೆ ಎನ್ನುವುದನ್ನು ನಾವು ಯಾವತ್ತು ಮರೆಯಬಾರದು.**

ರೈತರ ಪಂಪಸೆಟ್ ಗಳಿಗೆ ಸರ್ಕಾರದಿಂದ ಸಮರ್ಪಕವಾಗಿ ವಿದ್ಯುತ್ ಒದಗಿಸಬೇಕು. ನಾವು ಉಳಿಯಬೇಕಾದರೆ ನಮಗೆ ಅಗತ್ಯವಾಗಿ ಮಳೆ,ನೆರಳು,ಉಸಿರಿಗೆ ಅಗತ್ಯವಿರುವ ಅಮ್ಲಜನಕ ದೋರೆಯಬೇಕಾದಲ್ಲಿ ಹೆಚ್ಚು ಹೆಚ್ಚು ಮರಗಳನ್ನು ನೆಟ್ಟು ಬೆಳೆಸಬೇಕಾಗಿದೆ.



ಮರವಿದ್ದರೆ ಮಳೆ, ಮಳೆಯಿದ್ದರೆ ಬೆಳೆ ಬೆಳೆಯಿದ್ದರೆ ಬದುಕು ಎಂದು ತಿಳಿಸಿದರು. ಉಪನ್ಯಾಸಕಿ ಗೌರಮ್ಮ ಇವರು ರಾಷ್ಟ್ರೀಯ ರೈತರ ದಿನಾಚರಣೆ ಕುರಿತು ಉಪನ್ಯಾಸ ನೀಡಿದರು. ತಾಲೂಕಿನ ಪ್ರಗತಿಪರ ರೈತರಿಗೆ ಕಲ್ಮಠ ಶ್ರೀ ಕೃಷಿರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಿದ್ಯಾರ್ಥಿಗಳಿಂದ ರೈತರ ಪಾದಪೂಜೆ ನಡೆಯಿತು.

ಶಾಲೆಯ ಆವರಣದಲ್ಲಿ ವಿದ್ಯಾರ್ಥಿಗಳಿಂದ ಗ್ರಾಮೀಣ ಸೋಗಡಿನ ಜೀವನವನ್ನು ಪರಿಚಯಿಸುವ ಕಾಳು, ಧಾನ್ಯಗಳನ್ನು ಕುಟ್ಟುವುದು, ಬೀಸುವುದು, ರೋಟ್ಟಿ ಮಾಡುವುದು, ,ಭತ್ತರಾಶಿ ಮಾಡುವದು ಸೇರಿದಂತೆ ವಿವಿಧ ರೂಪಕಗಳು ಗಮನ ಸೇಳೆದವು. ಕಾರ್ಯಕ್ರಮದಲ್ಲಿ ಮುಖ್ಯಗುರು ಮಂಜುನಾಥ ಕಮತರ್, ತಾಲೂಕಾ ವಕೀಲರ ಸಂಘದ ಅಧ್ಯಕ್ಷ ರವಿಕುಮಾರ ಪಾಟೀಲ, ಪ್ರೌಢಶಾಲಾ ಮುಖ್ಯೋಪಾಧ್ಯಾಯ ಪ್ರಭಯ್ಯ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು ಆಡಳಿತಾಧಿಕಾರಿ ಸಂಗಯ್ಯ ಸ್ವಾಮಿ. ಆರ್, ವೆಂಕಯ್ಯ ಶೆಟ್ಟಿ , ಶಂಕರಾನಂದ , ಕೃಪಾಸಾಗರ ಪಾಟೀಲ್, ಕಲ್ಮಠ ಪಿಯು ಕಾಲೇಜಿನ ಪ್ರಾಚಾರ್ಯರಾದ ಎಸ್.ಎಸ್. ಪಾಟೀಲ್. ಕಲ್ಮಠ ಪದವಿ ಕಾಲೇಜಿನ ಪ್ರಾಚಾರ್ಯರಾದ ಸಿದ್ದನಗೌಡ ಪಾಟೀಲ್. ಶಿಕ್ಷಕರಾದ ಎಂ.ಎಂ. ಹಿರೇಮಠ, ಪ್ರಭಾವತಿ ಸೇರಿದಂತೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು.

# ನಗರದಲ್ಲಿ ಹೆಚ್ಚುತ್ತಿರುವ ಗಾಂಜಾ ಮತ್ತು ಮಾದಕ ವಸ್ತುಗಳ ಹಾವಳಿ ತಪ್ಪಿಸಲು ಶಾಸಕರಿಗೆ ಮನವಿ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಿಂಧನೂರು ನಗರದಲ್ಲಿ ಹೆಚ್ಚುತ್ತಿರುವ ಗಾಂಜಾ ಮತ್ತು ಮಾದಕ ವಸ್ತುಗಳ ಹಾವಳಿಯಿಂದ ವಿದ್ಯಾರ್ಥಿ/ಯುವಜನರು ದುಶ್ಚಟಕ್ಕೆ ಒಳಗಾಗಿದ್ದು, ಇದನ್ನು ತಡೆಯಲು ಪೊಲೀಸ್, ಅಬಕಾರಿ ಸೇರಿದಂತೆ ವಿವಿಧ ಇಲಾಖೆಗಳನ್ನೊಳಗೊಂಡ ಸಭೆ ಕರೆದು ಕಠಿಣ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಬೇಕೆಂದು ಒತ್ತಾಯಿಸಿ ಮಾದಕ ದ್ರವ್ಯ ನಿರ್ಮೂಲನಾ ಒಕ್ಕೂಟದಿಂದ ಶಾಸಕ ಹಂಪನಗೌಡ ಬಾದರ್ಲಿ ಅವರಿಗೆ ಬುಧವಾರ ಮನವಿಪತ್ರ ಸಲ್ಲಿಸಲಾಯಿತು.**

ಸಾರ್ವಜನಿಕರ ಆತಂಕ ನಿವಾರಿಸಿ ನಗರದಲ್ಲಿ ಗಾಂಜಾ ಹಾಗೂ ಮಾದಕ ವಸ್ತುಗಳ ಹಾವಳಿ ದಿನದಿಂದ ದಿನಕ್ಕೆ ಮಿತಿ ಮೀರುತ್ತಿದೆ. ಕೂಡಲೇ ಎಚ್ಚೆತ್ತುಕೊಂಡು ಕಡಿವಾಣ ಹಾಕದೇ ಹೋದರೆ ಸಾಮಾಜಿಕ ಹಾನಿಗೆ ದಾರಿ ಮಾಡಿಕೊಡುವ ಸಂಭವ ಹೆಚ್ಚಿದೆ. ನಗರದ ವಿವಿಧ ವಾರ್ಡ್ ಗಳಲ್ಲಿ, ನಗರಕ್ಕೆ ಹೊಂದಿಕೊಂಡ ನಿರ್ಜನ ಪ್ರದೇಶ ಹಾಗೂ ಇತರೆಡೆ ಗಾಂಜಾ ಪ್ಯಾಕೆಟ್ ತಯಾರಿಸಿ ವ್ಯಸನಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ಗಾಂಜಾ ಮತ್ತು ಮಾದಕ ವಸ್ತುಗಳ ಪೆಡ್ಲರ್‌ಗಳು ವಿದ್ಯಾರ್ಥಿ, ಯುವಜನರನ್ನು ಗುರಿಯಾಗಿಟ್ಟುಕೊಂಡು ವ್ಯವಸ್ಥಿತವಾಗಿ ಜಾಲ ಹೆಣೆದು, ಮುಗ್ದರನ್ನು ಬಲಿಪಶು ಮಾಡುತ್ತಿದ್ದಾರೆ.

ಇಷ್ಟೇ ಅಲ್ಲದೇ ಗಾಂಜಾ ಮತ್ತು



ಮಾದಕ ವಸ್ತು ಸೇವಿಸಿದ ಯುವಕರು ನಶೆಯಲ್ಲಿ ನಗರದ ವಾರ್ಡ್‌ಗಳಲ್ಲಿ ಸೈಕಲ್ ಮೋಟರ್‌ಗಳನ್ನು ಮನಬಂದಂತೆ ಚಲಾಯಿಸುವುದು, ಬಡಿಗೆ ಇಲ್ಲವೇ ಇನ್ನಿತರೆ ವಸ್ತುಗಳನ್ನು ಕೈಯಲ್ಲಿ ತಿರುಗಿಸುತ್ತಾ ಸಾರ್ವಜನಿಕರಿಗೆ ಬಹಿರಂಗವಾಗಿ ಹೆದರಿಸುವುದು-ಬೆದರಿಸುವುದು ಮಾಡುತ್ತಿದ್ದಾರೆ. ದಿನವೂ ಒಂದಿಲ್ಲೊಂದು ವಾರ್ಡ್ ಗಳಲ್ಲಿ ಈ ತರಹದ ಘಟನೆಗಳು ನಡೆಯುತ್ತಿದ್ದು, ಇದರಿಂದ ಹಲವು ಜನರು ಆತಂಕಿತರಾಗಿದ್ದಾರೆ ಎಂದು ಮನವಿಪತ್ರದಲ್ಲಿ ಉಲ್ಲೇಖಿಸಿದ್ದಾರೆ. ನಗರದ ಮಹೆಬೂಬಿಯಾ ಕಾಲೋನಿ, ಶರಣಬಸವೇಶ್ವರ ಕಾಲೋನಿ, ಇಂದಿರಾನಗರ, ಪ್ರಶಾಂತನಗರ, ಖದರಿಯಾ ಕಾಲೋನಿ, ಜವಳಗೇರಾ ಹಾಗೂ ಕೆಲ ಪುನರ್ವಸತಿ ಕ್ಯಾಂಪ್‌ಗಳಲ್ಲಿ ಗಾಂಜಾ ಮಾರಾಟ ರಾಜಾರೋಷವಾಗಿ ನಡೆಯುತ್ತಿದೆ ಎಂದು ಸಾರ್ವಜನಿಕರು ಹೇಳುತ್ತಿದ್ದಾರೆ. ಚಾಕೂಲೇಟ್‌ನಲ್ಲಿ ಮಾದಕ ವಸ್ತುವನ್ನು ಸೇರಿಸಿ ಮಾರಾಟ, ಡ್ರಗ್ಸ್ ಒಳಗೊಂಡ ಇಂಜೆಕ್ಷನ್ ಮಾರಾಟ ಮಾಡಲಾಗುತ್ತಿದೆ ಎಂದು ನಾಗರಿಕರಿಂದ ತಿಳಿದುಬಂದಿದೆ.

ಇಷ್ಟೆಲ್ಲಾ ನಡೆಯುತ್ತಿದ್ದರೂ ಪೊಲೀಸ್ ಇಲಾಖೆ ಇದನ್ನು ತಡೆಯಲು ಕಠಿಣ ಕ್ರಮಕ್ಕೆ ಮುಂದಾಗುತ್ತಿಲ್ಲ ಎಂದು ನಾಗರಿಕರು ದೂರುತ್ತಿದ್ದಾರೆ ಎಂದು ಮನವಿಪತ್ರದಲ್ಲಿ ತಿಳಿಸಿದ್ದಾರೆ.

ಮಾಹಿತಿ ಸೋರಿಕೆ ಆರೋಪ

ಇತ್ತೀಚೆಗೆ ಪೊಲೀಸ್ ಇಲಾಖೆಯೇ ಸಿಂಧನೂರಿನ ಸರ್ಕ್ಯೂಟ್‌ಹೌಸ್‌ನಲ್ಲಿ ಏರ್ಪಡಿಸಿದ್ದ ಅಪರಾಧ ತಡೆ ಮಾಸಾಚರಣೆ ಕುರಿತ ಪ್ರಮುಖ ರಾಜಕೀಯ ಮುಖಂಡರು ಹಾಗೂ ಸಾರ್ವಜನಿಕರ ಸಭೆಯಲ್ಲಿ, ಮಾದಕ ವಸ್ತುಗಳ ಮಾರಾಟದ ಜಾಲದ ಕುರಿತು ಚರ್ಚೆಯಾಗಿರುತ್ತದೆ. ಈ ಸಭೆಯಲ್ಲಿ ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಮಾಜಿ ಸಂಸದ ಕೆ.ವಿರೂಪಾಕ್ಷಪ್ಪ ಅವರೂ ಕೂಡ ಮಾದಕ ವಸ್ತುಗಳ ಮಾರಾಟ ಜಾಲವನ್ನು ಪತ್ತೆಹಚ್ಚಿ ಕಠಿಣ ಕ್ರಮ ಜರುಗಿಸುವಂತೆ ಒತ್ತಾಯಿಸಿರುತ್ತಾರೆ. ನಗರದ ಮುಖಂಡರೊಬ್ಬರು ಪೊಲೀಸ್ ಅಧಿಕಾರಿಯೊಬ್ಬರಿಗೆ ಡ್ರಗ್ ಪೆಡ್ಲರ್‌ವೊಬ್ಬನ ಕುರಿತಾಗಿ ನೀಡಿದ ಗೌಪ್ಯ ಮಾಹಿತಿಯು ಸೋರಿಕೆಯಾಗಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವ ಬದಲಾಗಿ, ಮಾಹಿತಿ ನೀಡಿದ ವ್ಯಕ್ತಿಯ ಮನೆಗೆ ಆರೋಪಿತ ಯುವಕ ಡಿ.15ರಂದು ರಾತ್ರೋ ರಾತ್ರಿ ನುಗ್ಗಿ ಜೀವ ಬೆದರಿಕೆ ಹಾಕಿದ ಘಟನೆ ನಡೆದಿದೆ.

ಇದನ್ನು ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸದೇ ಇದ್ದರೆ ಸಾರ್ವಜನಿಕರು ಅಪರಾಧ ತಡೆಗೆ ಸಹಕರಿಸುವುದಾದರೂ ಹೇಗೆ ? ಹೀಗಾದರೆ ಸಾರ್ವಜನಿಕರು ಇಲಾಖೆಯ ಅಧಿಕಾರಿಗಳಿಗೆ ಹೇಗೆ ಮಾಹಿತಿ ಕೊಡುತ್ತಾರೆ ? ಒಂದು ವೇಳೆ ಮಾಹಿತಿ ಕೊಟ್ಟವರ ಹೆಸರು ಈ ರೀತಿ ಸೋರಿಕೆಯಾಗಿ ನಾಳೆ ಏನಾದರೂ ಅವಘಡವಾದರೆ ಹೊಣೆ ಯಾರು ? ಒಕ್ಕೂಟದ ಸಂಚಾಲಕರು ಶಾಸಕರ ಗಮನ ಸೆಳೆದರು. ಈ ಕುರಿತು ನಮ್ಮ ಮನವಿಯನ್ನು ಗಂಭೀರವಾಗಿ ಪರಿಗಣಿಸಿ ಪೊಲೀಸ್ ಇಲಾಖೆ ಅಧಿಕಾರಿಗಳ ಮತ್ತು ತಾಲೂಕು ದಂಡಾಧಿಕಾರಿಗಳ ಸಭೆ ಕರೆದು, ವಿಸ್ತೃತವಾಗಿ ಚರ್ಚಿಸಿ ಗಾಂಜಾ ಮತ್ತು ಮಾದಕ ವಸ್ತುಗಳ ಮಾರಾಟ ಮತ್ತು ಸೇವನೆ ಮಾಡುವವರ ಮೇಲೆ ಕಠಿಣ ಕ್ರಮ ಜರುಗಿಸಲು ಸೂಕ್ತ ನಿರ್ದೇಶನ ನೀಡಬೇಕೆಂದು ಒಕ್ಕೂಟದ ಸಂಚಾಲಕರು ಮನವಿ ಮಾಡಿದರು.

ಜನವರಿ ಮೊದಲ ವಾರದಲ್ಲಿ ಸಭೆ, ಶಾಸಕರ ಭರವಸೆ

ಈ ಕುರಿತಂತೆ ಜನವರಿ 2026ರ ಮೊದಲ ವಾರದಲ್ಲಿ ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳ ಸಭೆ ಕರೆದು ವಿಸ್ತೃತವಾಗಿ ಚರ್ಚಿಸಿ ಕ್ರಮ ಜರುಗಿಸಲಾಗುವುದು ಎಂದು ಶಾಸಕ ಹಂಪನಗೌಡ ಬಾದರ್ಲಿ ಒಕ್ಕೂಟದ ಸಂಚಾಲಕರಿಗೆ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಒಕ್ಕೂಟದ ಸಂಚಾಲಕರಾದ ಚಂದ್ರಶೇಖರ ಗೊರಬಾಳ, ಬಾಬರ್‌ಪಾಷಾ ವಕೀಲರು, ಹುಸೇನ್‌ಸಾಬ್, ಖಾದರ್‌ಸುಬಾನಿ, ಬಸವರಾಜ ಬಾದರ್ಲಿ, ಜಿಲಾನಿಪಾಷಾ, ಚಿಟ್ಟಿಬಾಬು ಬೂದಿವಾಳಕ್ಯಾಂಪ್, ಶಂಕರ ಗುರಿಕಾರ, ಬಸವಂತರಾಯಗೌಡ ಕಲ್ಲೂರು, ರೆಹಮಾನ್‌ಸಾಬ್, ಅಬುಲೈಸ್, ಬಸವರಾಜ ಹಳ್ಳಿ, ಸರ್ಫರಾಜ್‌ಖಾನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

TGAMC ನೇಮಕಾತಿ 2025–18 ಪ್ರೊಫೆಸರ್, ಸ್ಟಾಫ್ ನರ್ಸ್ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಖಿಉಂಒಅ ನೇಮಕಾತಿ 2025: 18 ಪ್ರೊಫೆಸರ್, ಸ್ಟಾಫ್ ನರ್ಸ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ತಾರಾನಾಥ್ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಡಿಸೆಂಬರ್ 2025 ರ ಖಿಉಂಒಅ ಅಧಿಕೃತ ಅಧಿಸೂಚನೆಯ ಮೂಲಕ ಪ್ರೊಫೆಸರ್, ಸ್ಟಾಫ್ ನರ್ಸ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬಳ್ಳಾರಿ ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 30–ಡಿಸೆಂಬರ್–2025 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಹುದ್ದೆಯ ಹೆಸರು ಕೊನೆಯ ದಿನಾಂಕ ಆಯುರ್ವೇದ ಸಹಾಯಕ ಪ್ರಾಧ್ಯಾಪಕರು 26 ಡಿಸೆಂಬರ್ 2025, ಆಯುರ್ವೇದ ಅಸೋಸಿಯೇಟ್ ಪ್ರೊಫೆಸರ್, ಆಯುರ್ವೇದ ಪ್ರಾಧ್ಯಾಪಕರು ತುರ್ತು ವೈದ್ಯಕೀಯ ಅಧಿಕಾರಿ 30 ಡಿಸೆಂಬರ್ 2025 ನಿವಾಸಿ ವೈದ್ಯಕೀಯ ಅಧಿಕಾರಿ/ ಶಸ್ತ್ರಚಿಕಿತ್ಸಾ/ ವೈದ್ಯಕೀಯ ಅಧಿಕಾರಿ ಮೇಟ್ರನ್/ನರ್ಸಿಂಗ್ ಸೂಪರಿಂಟೆಂಡೆಂಟ್, ಸ್ಟಾಫ್ ನರ್ಸ್,ಪಂಚಕರ್ಮ ನರ್ಸ್, ಗ್ರಂಥಪಾಲಕ Official Website: tgamcballari.org ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 11–12–2025 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30–ಡಿಸೆಂಬರ್–2025

## ಸಿಂಧನೂರಿನ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಹಾಗೂ ರಸ್ತೆ ವ್ಯಾಪಾರಿಗಳಿಗೆ ಚಳಿಗಾಲದ ಉಪಯೋಗಕ್ಕಾಗಿ 200ಕ್ಕೂ ಹೆಚ್ಚು ಗರಂ ಟೋಪಿ ಮತ್ತು ಸ್ವೆಟರ್‌ಗಳ ವಿತರಣೆ :ಯೂತ್ ಫೋರಂ ಹಾಗೂ ಮೆಟ್ರೋ ಬ್ರಾಂಡ್ಸ್ ಶಾಪಿ ಸಿಂಧನೂರು

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಿಂದನೂರು ಯೂತ್ ಫೋರಂ ಹಾಗೂ ಮೆಟ್ರೋ ಬ್ರಾಂಡ್ಸ್ ಶಾಪಿ, ಸಿಂದನೂರು ಇವರ ಸಹಯೋಗದಲ್ಲಿ ನಗರದ ತಾಯಿ ಮಕ್ಕಳ ಆಸ್ಪತ್ರೆ ಹಾಗೂ ರಸ್ತೆ ವ್ಯಾಪಾರಿಗಳಿಗೆ ಚಳಿಗಾಲದ ಉಪಯೋಗಕ್ಕಾಗಿ 200ಕ್ಕೂ ಹೆಚ್ಚು ಗರಂ ಟೋಪಿ ಮತ್ತು ಸ್ವೆಟರ್‌ಗಳನ್ನು ವಿತರಿಸಲಾಯಿತು. ಚಳಿಯಿಂದ ರಕ್ಷಣೆ ನೀಡುವ ಉದ್ದೇಶದಿಂದ ಆಯೋಜಿಸಲಾದ ಈ ಸಮಾಜಮುಖಿ ಸೇವಾ ಕಾರ್ಯಕ್ರಮದಲ್ಲಿ ಅಗತ್ಯವಿರುವ ಮಕ್ಕಳಿಗೂ ಹಾಗೂ ರಸ್ತೆ ವ್ಯಾಪಾರಿಗಳಿಗೆ ಉಚಿತವಾಗಿ ಟೋಪಿ ಮತ್ತು ಸ್ವೆಟರ್‌ಗಳನ್ನು ನೀಡುವ ಮೂಲಕ ಮಾನವೀಯತೆಯ ಸಂದೇಶವನ್ನು ಸಾರಲಾಯಿತು.**

ಈ ಟೋಪಿ ಮತ್ತು ಸ್ವೆಟರ್‌ಗಳನ್ನು ಸಯ್ಯದ್ ಮನ್ಸೂರ್, ಮೆಟ್ರೋ ಬ್ರಾಂಡ್ಸ್ ಶಾಪಿ, ಸಿಂದನೂರು ಇವರಿಂದ ದಾನವಾಗಿ ನೀಡಲಾಗಿದೆ. ಅವರ ಸಮಾಜಪರ ಕಾಳಜಿ ಮತ್ತು ಸೇವಾ ಮನೋಭಾವಕ್ಕೆ ಸಿಂದನೂರು ಯೂತ್ ಫೋರಂ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು. ವಿತರಣೆ ಕಾರ್ಯಕ್ರಮದಲ್ಲಿ ಸೈಯ್ಯದ್ ತನ್ವೀರ್ (ನೊಬೆಲ್ ಟೆಕ್ನೋ ಸ್ಕೂಲ್ ಸಿಂಧನೂರು), ಸರ್ಫರಾಜ್ ಖಾನ್ (ದ ಕ್ಲಾಸ್ ಅಕಾಡೆಮಿ ಸಿಂಧನೂರು), ಎಜಾಜ್ ಹುಸೈನ್ (ಅಸಿಸ್ಟಂಟ್ ಪ್ರೊಫೆಸರ್, ತಾವರಗೇರೆ), ಸಿರಾಜ್ ಪಾಷಾ (ಬಿಜೆಪಿ ಮುಖಂಡರು. ಸಿಂಧನೂರು), ಸದಾಮ್ ಹುಸೈನ್(ರಿಯಲ್ ಎಸ್ಟೇಟ್ ಉದ್ಯಮುದಾರರು ಸಿಂಧನೂರು), ಮೂಸಾ(ಇಂಜಿನಿಯರ್), ಫಾರೂಕ್, ಆರಿಫ್ ಅನ್ಸಾರಿ(ಫ್ಲಿಪ್ಕಾರ್ಟ್ ಮ್ಯಾನೇಜರ್ ಸಿಂಧನೂರು) ಹಾಗೂ ಅಲಿ ಅವರು ಉಪಸ್ಥಿತರಿದ್ದು ಸಿಂದನೂರು ಯೂತ್ ಫೋರಂ ಮುಂದಿನ ದಿನಗಳಲ್ಲೂ ಇಂತಹ ಮಾನವೀಯ ಮತ್ತು ಸಮಾಜ ಮುಖಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುವುದಾಗಿ ಯೂತ್ ಫೋರಂ ಅಧ್ಯಕ್ಷರಾದ ಸರ್ಫರಾಜ್ ಖಾನ್ ಪತ್ರಿಕೆಗೆ ಮಾಹಿತಿ ನೀಡಿದರು.




## ತುರ್ವಿಹಾಳ ಪಟ್ಟಣ ಪಂಚಾಯತಿ ಉಪಚುನಾವಣೆ ಬಿಜೆಪಿ ಅಭ್ಯರ್ಥಿ ಮುನಿಯಪ್ಪ ಬೆಳ್ಳಿ ಗೆಲುವು ಸಂಭ್ರಮ





ನೈಜ್ಯ ದೆಸೆ ನ್ಯೂಸ್

ಸಿಂಧನೂರು: ತಾಲೂಕಿನ ತುರ್ವಿಹಾಳ ಪಟ್ಟಣ ಪಂಚಾಯತಿ ಉಪಚುನಾವಣೆ ಮತ ಎಣಿಕೆಯಾಗಿ ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ಮುನಿಯಪ್ಪ ಬೆಳ್ಳಿ 22 ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ ಎಂದು ಚುನಾವಣಾ ಅಧಿಕಾರಿ ತಿಳಿಸಿದರು.

ತಾಲೂಕಿನ ತುರ್ವಿಹಾಳ ಪಟ್ಟಣ ಪಂಚಾಯತಿ ವಾರ್ಡ್ ನಂ–4ರ ಸದಸ್ಯರು ಅಕಾಲಿಕ ಮರಣದಿಂದಾಗಿ ತೆರವು ಗೊಂಡಿದ್ದ ಸ್ಥಾನಕ್ಕೆ ಚುನಾವಣೆ ಘೋಷಣೆಯಾಗಿ ರವಿವಾರ ಚುನಾವಣೆ ನಡೆದು ಬುಧವಾರ ಮತ ಎಣಿಕೆ ನಿಗದಿಯಾಗಿತ್ತು. ಅದರಂತೆ ಕಾಂಗ್ರೆಸ್ ಪಕ್ಷದಿಂದ ಬಾಲಾಜಿ ಮಡಿವಾಳ ಹಾಗೂ ಬಿಜೆಪಿ ಪಕ್ಷದಿಂದ ಮುನಿಯಪ್ಪ ಬೆಳ್ಳಿ ಸ್ಪರ್ಧಿಸಿದ್ದರು. ಬಾಲಾಜಿ 354 ಮತಗಳನ್ನು ಪಡೆದರೆ, ಮುನಿಯಪ್ಪ ಬೆಳ್ಳಿ 376 ಮತಗಳನ್ನು ಪಡೆದು ಗೆಲುವು ಸಾಧಿಸಿದ್ದಾರೆ.

ಗೆಲುವಿನ ಸಂಭ್ರಮ: 22 ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ ತರುವಾಯ ಬಿಜೆಪಿ ಪಕ್ಷದ ಕಾರ್ಯಕರ್ತರು ಪಟಾಕಿ ಸಿಡಿಸಿ ಬಣ್ಣ ಎರಚಿ ಸಂಭ್ರಮಿಸಿದರು. ಗೆಲುವಿನ ಸಂಭ್ರಮದಲ್ಲಿ ಮಾಜಿ ಶಾಸಕ ಪ್ರತಾಪ್ ಪಾಟೀಲ್, ಸಿಂಧನೂರು ಬಿಜೆಪಿ ಮುಖಂಡ ಕೆ.ಕರಿಯಪ್ಪ, ಸೇರಿದಂತೆ ಸ್ಥಳೀಯ ಬಿಜೆಪಿ ಮುಖಂಡರಾದ ಶಂಕ್ರಪ್ಪ ಸಾಹುಕಾರ, ರುದ್ರಸ್ವಾಮಿ ಕೆಂಡದಮಠ, ನಾಗಪ್ಪ ನಾಯಕ, ಬಾಲಪ್ಪ ಕುಂಟೋಜಿ, ಕರಿಯಪ್ಪ ಭಂಗಿ, ಸಿದ್ದೇಶ್ವರ ಗುರಿಕಾರ, ಶಿವು ಮೊಬೈಲ್ ಶಾಪ್, ದುರಗೇಶ ಜಿ.ವಕೀಲ, ಚಂದ್ರುಪವಾಡಶೆಟ್ಟಿ, ರಮೇಶ ಸಂಕನಾಳ, ನಿರುಪಾದಿ ಶ್ರೀನಿವಾಸ ಕ್ಯಾಂಪ್, ಮುನಿಸ್ವಾಮಿ ಸೇರಿದಂತೆ ಅನೇಕರು ಸಂಭ್ರಮಿಸಿದರು.

## ಡಿಸೆಂಬರ್ 27ರಂದು ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 24 (ಕರ್ನಾಟಕ ವಾರ್ತೆ): ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ನೋಡಲ್ ಆಫೀಸರ್ 220 ಕೆವಿ ಸ್ವೀಕರಣ ಕೇಂದ್ರ ಕೆಪಿಟಿಸಿಎಲ್ ರಾಯಚೂರು ಅವರ ಮೂರನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರುವ ಪ್ರಯುಕ್ತ ಡಿಸೆಂಬರ್ 27ರ ಬೆಳಿಗ್ಗೆ 10 ರಿಂದ ಸಂಜೆ 06 ಗಂಟೆವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.**

ಅಂದು ಬೆಳಿಗ್ಗೆ 10ರಿಂದ ಸಿಇಒ ಆಫೀಸ್, ಶ್ರೀರಾಮ ನಗರ, ಉದಯ ನಗರ, ಆಜಾದ್ ನಗರ, ಸ್ಟೇಶನ್ ಏರಿಯಾ, ಇಂದಿರಾ ನಗರ, ಅಶೋಕ್ ಡಿಪೋ, ಗೋಲ್ ಮಾರ್ಕೆಟ್, ಚಾರಾ ಬಜಾರ್, ಮಚ್ಚಿ ಬಜಾರ್, ಕಮೇಲಾ, ಅರಬ್ ಮೊಲ್ಲಾ, ಆಟೋ ನಗರ, ಸಿಯಾತಲಾಬ್, ಗಂಜ್ ಸರ್ಕಲ್, ಗೋಶಾಲ ರೋಡ್, ಡಿಸ್ಟ್ರಿಕ್ಟ್ ಕೋರ್ಟ್, ಜಿಲ್ಲಾ ಪಂಚಾಯತ್ ಆಫೀಸ್, ಟಿಫಾನೀಸ್, ಬಸವೇಶ್ವರ ಸರ್ಕಲ್, ಫಾರೆಸ್ಟ್ ಆಫೀಸ್, ಫೈರ್ ಸ್ಟೇಶನ್, ವೆರ?ನರಿ ಆಸ್ಪತ್ರೆ, ಕಾಂಗ್ರೆಸ್ ಆಫೀಸ್, ಮಂಚಲಾಪುರ ಕ್ರಾಸ್, ಹೊಸ ಶಿವಂ ಆಸ್ಪತ್ರೆ, ಕ್ಲಾರಿಟಿ ಆಸ್ಪತ್ರೆ, ಭಂಡಾರಿ ಆಸ್ಪತ್ರೆ, ಸುದ್ದಿಮೂಲ, ಹಿಂದಿ ವರ್ಧಮಾನ, ಬಿಎಸ್‌ಎನ್‌ಎಲ್ ಕಚೇರಿ, ಹೊಂಡಾ ಶೋರೂಮ್, ಅಹ್ಮದ್ ಫಂಕ್ಷನ್ ಹಾಲ್, ಸುಣ್ಣಭಟ್ಟಿ, ಎಸ್‌ಆರ್‌ಎಸ್ ಲಾಡ್ಜ್, ರೈಲ್ವೆ ಸ್ಟೇಷನ್, ಆಫೀರ?ಸ್ ಕಾಲೋನಿ, ಆಶಾಪುರ ರಸ್ತೆ, ಗುಡ್ ಶೆಡ್ ರಸ್ತೆ, ಐಡಿಎಸ್‌ಎಮ್‌ಟಿ ಲೇಔಟ್, ಪವನ್ ಲೇಔಟ್, ಗ್ಯಾನ್ ಮಂದಿರ, ಆಫಿರ?ಸ್ ಕಾಲೋನಿ, ಮೆಥಡಿಸ್ಟ್ ಚರ್ಚ್, ಜಂಡಕಟ್ಟ, ನವರಂಗ ದರ್ವಾಜ, ಟಿಪ್ಪು ಸುಲ್ತಾನ್ ರೋಡ್, ಡಿ.ಸಿ. ಆಫೀಸ್ ಮುಂದುಗಡೆ, ಹಾಜಿ ಕಾಲೋನಿ, ಕೋಟ್‌ತಲಾರ್, ಹೊಸ ಸಿಎಮ್‌ಸಿ ಕಚೇರಿ, ಡ್ಯಾಡಿ ಕಾಲೋನಿ, ಆಶ್ರಫೀಯಾ ಕಾಲೋನಿ, ಕಾಕತೀಯ ಕಾಲೋನಿ, ಶಾಂತಿ ಕಾಲೋನಿ, ಡಾಲರ್ಸ್ ಕಾಲೋನಿ, ಪಿಸಿಬಿ ಕಾಲೋನಿ, ಪಾರ್ವತಿ ಕಾಲೋನಿ, ರಾಘವೇಂದ್ರ ಕಾಲೋನಿ, ಸಾರಾ ಟೀರ?ಸ್ ಕಾಲೋನಿ, ಒಳ ಚರಂಡಿ ಸಂಸ್ಕರಣ ಘಟಕ ಮಂಚಲಾಪೂರ ರೋಡ್, ಬಸವೇಶ್ವರ ಕಾಲೋನಿ, ಬಂದೇನವಾಜ್ ಕಾಲೋನಿ, ಭಾರತಿ ನಗರ, ಚೆಕ್ಪೋಸ್ಟ್, ಎನ್‌ಜಿಒ ಕಾಲೋನಿ, ಗೌಸಿಯಾ ಕಾಲೋನಿ, ಎಸ್.ಟಿ ನಿಜಾಮುದ್ದೀನ್ ಕಾಲೋನಿ, ದೇವರಾಜ್ ಅರಸ್ ಕಾಲೋನಿ. ಗಾಂಧಿ ಲೇಔಟ್, ಅಶೋಕ್ ಕುಮಾರ್ ಲೇಔಟ್, ಲಿಂಗಸುಗೂರು ರಸ್ತೆ, ಕೃಷಿ ವಿಶ್ವವಿದ್ಯಾಲಯ ಎದುರುಗಡೆ, ಶಿವಂ ಆಸ್ಪತ್ರೆ, ಎಸ್. ಎನ್.ಟಿ.ಟಾಕೀಸ್, ಲೋಹಾರವಾಡಿ, ಗಾಂಧಿ ಚೌಕ, ಬಂದರ್ ಗಲ್ಲಿ, ಎಂ.ಜಿ.ರಸ್ತೆ, ಹರಿಹರ ರಸ್ತೆ, ಮಕ್ತಲ ಪೇಟೆ, ಪಿಂಜರವಾಡಿ, ಶರಣಬಸವೇಶ್ವರ ಆಸ್ಪತ್ರೆ. ಬೆಟ್ಟದೂರ ಆಸ್ಪತ್ರೆ. ಪ್ಯಾರಾಮ್ ಗಾರ್ಡನ್, ವಡ್ಡಪ್ಪಜೀನ್ ಕುಂಬಾರಓಣಿ, ಮಡ್ಡಿ ಪೇಟೆ, ಬ್ರೆಸ್ತಾವಾರ ಪೇಟೆ, ಚಂದ್ರಮಾಲೇಶ್ವರ ಚೌಕ ಬಟ್ಟೆ ಬಜಾರ್ ತರಕಾರಿ ಮಾರ್ಕೆಟ್, ಮೇದರವಾಡಿ ಹೊಸ ಅಮೃತ ಆಸ್ಪತ್ರೆ ಸಂತೋಷಿ ನೊವಿತಾಲ್ ಸೇರಿದಂತೆ ಸುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಹೆಚ್ಚಿನ ಮಾಹಿತಿಗಾಗಿ 24*7 ಗ್ರಾಹಕರ ಸೇವಾ ಕೇಂದ್ರದ ದೂರವಾಣಿ ಸಂಖ್ಯೆ: 08532–226386, 08532–231999ಗೆ ಸಂಪರ್ಕಿಸುವಂತೆ ವಿದ್ಯುತ್ ವ್ಯತ್ಯಯದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸರ್ಕಾರ ದಲಿತರ ಮೇಲಿನ ದೌರ್ಜನ್ಯ ಪ್ರಕರಣ ಗಂಭೀರವಾಗಿ ಪರಿಗಣಿಸಿ ದೌರ್ಜನ್ಯವೆಸೆಗಿದವರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ರಾಜ್ಯದಲ್ಲಿ ದಲಿತರ ಮೇಲಾಗುತ್ತಿರುವ ದೌರ್ಜನ್ಯ ಪ್ರಕರಣಗಳನ್ನು ರಾಜ್ಯ ಸರಕಾರ ಗಂಭೀರವಾಗಿ ಪರಿಗಣಿಸಿ ದೌರ್ಜನ್ಯವೆಸಗುತ್ತಿರುವವರಿಗೆ ಕಠಿಣ ಶಿಕ್ಷೆಗೆ ಒಳಪಡಿಸಬೇಕೆಂದು ತಹಸೀಲ್ದಾರ್ ಮಂಜುನಾಥ ಭೋಗಾವತಿ ಮುಖಾಂತರ ಮುಖ್ಯಮಂತ್ರಿಗಳಿಗೆ ಮತ್ತು ಗೃಹ ಸಚಿವರಿಗೆ ದಲಿತ ಪರ ಸಂಘಟನೆಗಳ ಒಕ್ಕೂಟದಿಂದ ಮನವಿ ಪತ್ರ ಸಲ್ಲಿಸುವ ಮೂಲಕ ಬುಧವಾರ ಆಗ್ರಹಿಸಿದರು. ನಂತರ ದಲಿತ ಮುಖಂಡ ದೊಡ್ಡಪ್ಪ ಮುರಾರಿ ಮಾತನಾಡಿ ರಾಜ್ಯದಲ್ಲಿ ಅತ್ಯಧಿಕ ಹತ್ಯೆ ಪ್ರಕರಣಗಳು ಆಗುತ್ತಿರುವುದು ತಲೆ ತಗ್ಗಿಸುವಂತಹ ವಿಚಾರವಾಗಿದೆ.**

ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಸುಮಾರು 13,154ಕ್ಕೂ ಅಧಿಕ ದಲಿತರ ಮೇಲೆ ದೌರ್ಜನ್ಯ ಪ್ರಕರಣಗಳಾಗಿವೆ. ಕಳೆದ ನಾಲ್ಕೈದು ದಿನಗಳ ಹಿಂದೆ ಹುಬ್ಬಳ್ಳಿಯಲ್ಲಿ ಅನ್ಯ ಜಾತಿಯ ಯುವತಿ ದಲಿತ ಯುವಕನನ್ನು ಮದುವೆಯಾದ ಕಾರಣಕ್ಕೆ 7 ತಿಂಗಳ ಗರ್ಭಿಣಿಯನ್ನು ಸ್ವತಃ ತಂದೆಯೇ ಕೊಲೆ ಮಾಡಿದ್ದಾನೆ. ಇಂತಹ ಹಲವಾರು ಘಟನೆಗಳು ಜರುಗುತ್ತಿವೆ. ಆದ–ದ್ದರಿಂದ ರಾಜ್ಯ ಸರಕಾರ ಕೂಡಲೇ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ವಿಶೇಷವಾಗಿ ಪರಿಗಣಿಸಬೇಕೆಂದರು. ಸಿ.ದಾನಪ್ಪ ನಿಲೋಗಲ್ ಮಾತನಾಡಿ ಇದೇ ತಿಂಗಳು 22 ರಂದು ಪಾಮನಕಲ್ಲೂರು ಕ್ರಾಸ್ ಸಮೀಪದ ಹೊಲದಲ್ಲಿ ಜ್ಯೋತಿ ಎಂಬ ಯುವತಿಯ ಮೃತದೇಹ ಅನುಮಾನಸ್ಪದವಾಗಿ ದೊರೆತಿದೆ.

ಈ ಎರಡು ಪ್ರಕರಣಗಳಿಗೆ ಕಾರಣ–ರಾದ ಕೊಲೆಗಾರರನ್ನು ರಾಜ್ಯ ಸರಕಾರ ಕೂಡಲೇ ಸೂಕ್ತ ತನಿಖೆ ನಡೆಸಬೇಕು. ಈ ಎರಡು ಘಟನೆಗಳಲ್ಲಿ ಆರೋಪಿಗಳನ್ನು ಗಲ್ಲಿಗೇರಿಸಬೇಕೆಂದು ಒತ್ತಾಯಿಸಿದರು. ಪುರಸಭೆ ಸದಸ್ಯ ಮೌನೇಶ ಮುರಾರಿ, ಮಲ್ಲಯ್ಯ ಮುರಾರಿ, ಕಾಸಿಮಪ್ಪ.ಡಿ ಮುರಾರಿ, ಅಶೋಕ ಮುರಾರಿ, ಕಿರಣ ಮುರಾರಿ, ದುರ್ಗಪ್ರಸಾದ ತೋರಣದಿನ್ನಿ, ಮಲ್ಲಪ್ಪ ಗೋನಾಳ ಗಂಗಾಧರ ಮುರಾರಿ, ದುರುಗಪ್ಪ ಮುರಾರಿ, ಈರಪ್ಪ ಕುಣೆಕೆಲ್ಲೂರು, ಬಾಲಸ್ವಾಮಿ ಜಿನ್ನಾಪೂರು, ಮೋಹನ ಮುರಾರಿ, ಬಸವಂತ ಕಡಬೂರು, ಸುಭಾಸ ಕಡಬೂರು ಸೇರಿದಂತೆ ಇನ್ನಿತರರಿದ್ದರು.



## ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆದ ಹಲುಗಂಬ ಉತ್ಸವ



ನೈಜ್ಯ ದೆಸೆ ನ್ಯೂಸ್

ಅರಕೇರಾ: ತಾಲೂಕಿನ ಬಿ.ಗಣೇಕಲ್ ಗ್ರಾಮದ ಶ್ರೀ ಮಾರುತೇಶ್ವರ ದೇವರ ಹಾಲುಗಂಬ ಉತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಬುಧವಾರ ಸಂಜೆ ಅದ್ದೂರಿಯಾಗಿ ನಡೆಯಿತು.

ಶ್ರೀ ಮಾರುತೇಶ್ವರ ದೇವರ ಜಾತ್ರಾ ಮಹೋತ್ಸವ ಎಳ್ಳ ಅಮವಾಸ್ಯೆಯ ಆರನೇ ದಿನ ನಡೆಯುವ ಹಾಲುಗಂಬ ಹತ್ತುವ ಸ್ಪರ್ಧೆಯಲ್ಲಿ ಚಿಕ್ಕ ಮಕ್ಕಳು, ಯುವಕರು ಉತ್ಸಾಹದಿಂದ ಪಾಲ್ಗೊಂಡಿದ್ದರು. ಸತತ ಎರಡು ಗಂಟೆಗೂ ಅಧಿಕ ಸಮಯ ಹಾಲುಗಂಬ ಉತ್ಸವ ಸ್ಪರ್ಧೆ ನಡೆಯಿತು. ಒಬ್ಬರ ಮೇಲೆ ಒಬ್ಬರು ಹಾಲುಗಂಬ ಹತ್ತುತ್ತಾ ಕೆಳಗೆ ಜಾರಿ ಬೀಳುವ ದೃಶ್ಯಗಳನ್ನು ಕಂಡು ನೆರೆದಿದ್ದ ಯುವಕರು ಶಿಳ್ಳೆ, ಚಪ್ಪಾಳೆಗಳ ಮೂಲಕ ಸ್ಪರ್ಧಾಳುಗಳನ್ನು ಹುರಿದುಂಬಿಸುತ್ತಿದ್ದರು.

ಹಲುಂಗಬಕ್ಕೆ ಎರಚುತ್ತಿದ್ದ ನೀರಿನ ರಸಭಸಕ್ಕೆ ಕಂಬ ಹತ್ತಲು ಹರಸಾಹಸ ಪಡುವಂತಾಯಿತು. ಬಸವರಾಜ ಪಿಲಿಗುಂಡ ಅವರ ಕಂಬ ಹತ್ತುವ ಮೂಲಕ ಪ್ರಥಮ ಸ್ಥಾನ ಪಡೆದರು. ಶ್ರೀ ಮಾರುತೇಶ್ವರ ದೇವಸ್ಥಾನದ ಸಮಿತಿಯವರು ಪ್ರಥಮ ಸ್ಥಾನ ಪಡೆದ ವ್ಯಕ್ತಿಗೆ ಬೆಳ್ಳಿ ಕಡಗ ನೀಡಿ ಸನ್ಮಾನಿಸಿ ಗೌರವಿಸಲಾಯಿತು. ನೂತನವಾಗಿ ತಯಾರಿಸಿದ ಹಾಲುಗಂಬವನ್ನು ಎಳ್ಳು ಅಮಾವಾಸ್ಯೆಯ ಮರುದಿನ ಶ್ರೀ ಮಾರುತೇಶ್ವರ ದೇವಸ್ಥಾನದವರೆಗೆ ಮೆರವಣಿಗೆ ಮೂಲಕ ಸ್ಥಾಪಿಸಲಾಯಿತು. ಬುಧವಾರ ಬೆಳಿಗ್ಗೆಯಿಂದ ದೇವಸ್ಥಾನದಲ್ಲಿ ಶ್ರೀ ಮಾರುತೇಶ್ವರ ಮೂರ್ತಿಗೆ ಎಲೆ ಪೂಜೆ ಜೊತೆಗೆ ವಿಶೇಷ ಪೂಜೆಗಳು ನಡೆದವು. ಸುತ್ತಲಿನ ತಾಂಡಾಗಳಿಂದ, ವಿವಿಧ ಗ್ರಾಮಗಳ ಗ್ರಾಮಸ್ಥರು ಉತ್ಸವದಲ್ಲಿ ಪಾಲ್ಗೊಂಡು ಉತ್ಸವಕ್ಕೆ ಮೆರುಗು ನೀಡಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ದ್ವೇಷ ಭಾಷಣ ವಿದೇಯಕ ರದ್ದುಪಡಿಸದಿದ್ದರೆ ಬಿಜೆಪಿಯಿಂದ ಉಗ್ರ ಹೋರಾಟದ ಎಚ್ಚರಿಕೆ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ರಾಜ್ಯ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ತಡೆ ವಿಧೇಯಕ 2025 ಅನ್ನು ತಕ್ಷಣವೇ ರದ್ದುಪಡಿಸಬೇಕು ಎಂದು ಒತ್ತಾಯಿಸಿ ಲಿಂಗಸಗೂರು ತಾಲ್ಲೂಕು ಬಿಜೆಪಿ ಮಂಡಲದ ವತಿಯಿಂದ ಗ್ರೇಡ್ 2 ತಹಶೀಲ್ದಾರ್ ಬಸವರಾಜ್ ಝಳಕಿ ಮಠ ರವರ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.**

ಲಿಂಗಸಗೂರು ಬಿಜೆಪಿ ತಾಲ್ಲೂಕು ಘಟಕದ ನೇತೃತ್ವದಲ್ಲಿ ನಗರದ ಬಸ್ ನಿಲ್ದಾಣದ ಮುಂಭಾಗ ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ ನಡೆಸಿ. ನಂತರ ಮಾತನಾಡಿದ ಬಿಜೆಪಿ ಮುಖಂಡರು ಡಾ. ಬಿ.ಆರ್. ಅಂಬೇಡ್ಕರ್ ರಚಿಸಿರುವ ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವಾಗಿ ಈ ವಿಧೇಯಕ ಜಾರಿಗೊಂಡಿದೆ ಎಂದು ಆರೋಪಿಸಿದರು. ಸಂವಿಧಾನದ 19(1)ನೇ ವಿಧಿಯಡಿ ದೊರಕಿರುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಈ ವಿಧೇಯಕ ಉಲ್ಲಂಘಿ–ಸುತ್ತಿದ್ದು, ನಾಗರಿಕರ ಅಭಿವ್ಯಕ್ತಿ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನವಾಗಿದೆ ಎಂದರು. ಈ ವಿಧೇಯಕದಿಂದ ಸಾಮಾಜಿಕ ಚಳುವಳಿಗಳು, ಸಭೆ–ಸಮಾರಂಭಗಳು, ಮಾಧ್ಯಮ ಮತ್ತು ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಲಿದೆ. ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಇಂತಹ ವಿಧೇಯಕವನ್ನು ಜಾರಿಗೊಳಿಸಿರುವುದು ಭ್ರಷ್ಟ ಕಾಂಗ್ರೆಸ್ ಸರ್ಕಾರದ ಜನವಿರೋಧಿ ನಡೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಸಂವಿಧಾನದ ರಕ್ಷಣೆ ಮಾಡಬೇಕಾದ ಸರ್ಕಾರವೇ ಸಂವಿಧಾನ ವಿರೋಧಿ ಕಾನೂನು ಜಾರಿಗೆ ತಂದಿದೆ ಎಂದು ದೂರಿದರು. ಒಂದು ವೇಳೆ ಈ ವಿಧೇಯಕವನ್ನು ಹಿಂಪಡೆಯದೆ ಜಾ–ರಿಗೊಳಿಸಿದರೆ, ರಾಜ್ಯ ಬಿಜೆಪಿ ಹಾಗೂ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ನಂತರ ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಈ ಸಂದರ್ಭದಲ್ಲಿ ಬಿಜೆಪಿ ತಾಲೂಕ ಅಧ್ಯಕ್ಷ ಕೆ ನಾಗಭೂಷಣ್ ಹಾಗೂ ಮುದುಗಲ್ ಮಂಡಲ ಅಧ್ಯಕ್ಷ ಹುಲ್ಲೇಶ್ ಸಾಹುಕಾರ್ , ಬಿಜೆಪಿ ಮಾಜಿ ತಾಲ್ಲೂಕು ಅಧ್ಯಕ್ಷ ಅಯ್ಯಪ್ಪ ಮಾಳೂರು, ಹಿರಿಯ ಮುಖಂಡ ಗಿರಿಮಲ್ಲನಗೌಡ ಕರಡಕಲ್, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಬಸಣ್ಣ ಮೇಟಿ, ಭೀಮಣ್ಣ, ಶಂಕರಗೌಡ ಹಟ್ಟಿ, ವೀರನಗೌಡ ಸಣಗೌಡರ್ ಹನುಮಂತ ಮಲ್ಲ, ಖಾಜಾಸಾಬ್ ಆದಿಮನಿ, ಶಾಸಕರ ಆಪ್ತ ಸಹಾಯಕ ಪಕೀರಪ್ಪ ಸೇರಿದಂತೆ ಪಕ್ಷದ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.



## ಶಿಕ್ಷಣ ಮಾರ್ಗದರ್ಶಿ ವಿಶೇಷ

# ಎಂಡಿ ಅಕ್ಯುಪಂಕ್ಚರ್

ಅಕ್ಯುಪಂಕ್ಚರ್‌ನಲ್ಲಿ ಎಂಡಿ ಎನ್ನುವುದು ವೈದ್ಯಕೀಯ ಪದವೀಧರರಿಗೆ (MBBS, BHMS, ಇತ್ಯಾದಿ) ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಆಗಿದೆ (ಸಾಮಾನ್ಯವಾಗಿ 2–3 ವರ್ಷಗಳು), ಇದು ಸಾಂಪ್ರದಾಯಿಕ ಚೀನೀ ಔಷಧವನ್ನು (ಅಕ್ಯುಪಂಕ್ಚರ್) ಆಧುನಿಕ ಬಯೋಮೆಡಿಸಿನ್‌ನೊಂದಿಗೆ ಸಂಯೋಜಿಸುತ್ತದೆ, ಸೂಜಿ ತಂತ್ರಗಳು, ಮೆರಿಡಿಯನ್ ಸಿದ್ಧಾಂತ, ಸಮಗ್ರ ಆರೈಕೆ ಮತ್ತು ನೋವು/ಒತ್ತಡ ನಿರ್ವಹಣೆಯ ಮೇಲೆ ಕೇಂದ್ರೀಕರಿಸುತ್ತದೆ, ಸಾಮಾನ್ಯವಾಗಿ NEET ಅಥವಾ ವಿಶ್ವವಿದ್ಯಾಲಯ ಪರೀಕ್ಷೆಗಳ ಮೂಲಕ ಪ್ರವೇಶ ಪಡೆಯುತ್ತದೆ, ಇದು ಆಸ್ಪತ್ರೆಗಳು ಮತ್ತು ಕ್ಷೇಮ ಕೇಂದ್ರಗಳಲ್ಲಿ ಸಲಹೆಗಾರರು ಅಥವಾ ಸಂಯೋಜಿತ ವೈದ್ಯರಾಗಿ ವೃತ್ತಿಜೀವನಕ್ಕೆ ಕಾರಣವಾಗುತ್ತದೆ. ಪ್ರಾಚೀನ ಅಕ್ಯುಪಂಕ್ಚರ್ ತತ್ವಗಳನ್ನು (ಐದು ಅಂಶಗಳು, ಮೆರಿಡಿಯನ್‌ಗಳು) ಆಧುನಿಕ ವೈದ್ಯಕೀಯ ತಿಳುವಳಿಕೆಯೊಂದಿಗೆ ಸಂಯೋಜಿಸುತ್ತದೆ, ಸಮಗ್ರ ವಿಧಾನವನ್ನು ನೀಡುತ್ತದೆ. ಅವಧಿ: ಸಾಮಾನ್ಯವಾಗಿ 2–3 ವರ್ಷಗಳು. ಪಠ್ಯಕ್ರಮ: ಅಕ್ಯುಪಂಕ್ಚರ್ ಸಿದ್ಧಾಂತ ಮತ್ತು ಅಭ್ಯಾಸ, TCM, ಮೆರಿಡಿಯನ್ ವ್ಯವಸ್ಥೆಗಳು, ಅಕ್ಯುಪಂಕ್ಚರ್ ತಂತ್ರಗಳು ಮತ್ತು ಬಯೋಮೆಡಿಸಿನ್‌ನೊಂದಿಗೆ ಸಂಯೋಜನೆಯನ್ನು ಒಳಗೊಂಡಿದೆ. MBBS, BDS, BHMS, DMS, DHMS, ಅಥವಾ ಸಂಬಂಧಿತ ಕ್ಷೇತ್ರಗಳಲ್ಲಿ ಪದವಿ (ಎಲೆಕ್ಟ್ರೋಪತಿ). ಪ್ರವೇಶ ಪರೀಕ್ಷೆ: ಭಾರತದಲ್ಲಿ ಪ್ರವೇಶಕ್ಕಾಗಿ ಅಥವಾ ವಿಶ್ವವಿದ್ಯಾಲಯ–ನಿರ್ದಿಷ್ಟ ಪರೀಕ್ಷೆಗಳಿಗಾಗಿ NEET (ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ) ಯಲ್ಲಿ ಉತ್ತೀರ್ಣರಾಗುವುದು ಅಗತ್ಯವಾಗಿರುತ್ತದೆ. ಅಕ್ಯುಪಂಕ್ಚರ್ ಸಲಹೆಗಾರ, ಮಸಾಜ್ ಥೆರಪಿಸ್ಟ್, ಫಿಸಿಕಲ್ ಥೆರಪಿಸ್ಟ್ ಸಹಾಯಕ, ಕೈಯರ್ಪ್ರಾಕ್ಟರ್. ಕೆಲಸದ ಸ್ಥಳಗಳು: ಆಸ್ಪತ್ರೆಗಳು, ಕ್ಷೇಮ ಕೇಂದ್ರಗಳು, ಸಂಶೋಧನಾ ಸಂಸ್ಥೆಗಳು, ಖಾಸಗಿ ಅಭ್ಯಾಸ. ಪೂರ್ವ ಮತ್ತು ಪಾಶ್ಚಿಮಾತ್ಯ ತತ್ವಚಿಂತನೆಗಳನ್ನು ಮಿಶ್ರಣ ಮಾಡುವ ಮೂಲಕ ಇಡೀ ವ್ಯಕ್ತಿಗೆ ಚಿಕಿತ್ಸೆ ನೀಡುವುದಕ್ಕೆ ಒತ್ತು ನೀಡುತ್ತದೆ. ಸಮಗ್ರ ಔಷಧ: ಪರ್ಯಾಯ ಚಿಕಿತ್ಸೆಗಳನ್ನು ಸಾಂಪ್ರದಾಯಿಕ ಔಷಧದೊಂದಿಗೆ ವಿಲೀನಗೊಳಿಸಲು ವೃತ್ತಿಪರರನ್ನು ಸಿದ್ಧಪಡಿಸುತ್ತದೆ. ಅಕ್ಯುಪಂಕ್ಚರ್‌ನಲ್ಲಿ ಎಂಡಿ ಪದವಿ 2 ವರ್ಷಗಳ ಅವಧಿಯ ವೈದ್ಯಕೀಯ ಸ್ನಾತಕೋತ್ತರ ಕೋರ್ಸ್ ಆಗಿದ್ದು, ಕನಿಷ್ಠ ಅರ್ಹತೆ ಎಂ.ಬಿ.ಬಿ.ಎಸ್., ಬಿ.ಡಿ.ಎಸ್., ಡಿ.ಎಂ.ಎಸ್., ಡಿ.ಎಚ್.ಎಂ.ಎಸ್., ಬಿ.ಎಚ್.ಎಂ.ಎಸ್. ಇತ್ಯಾದಿ. ಈ ಕಾರ್ಯಕ್ರಮವು ಅರ್ಹ ಅಭ್ಯರ್ಥಿಗಳಿಗೆ ಅಕ್ಯುಪಂಕ್ಚರ್ ಮತ್ತು ಓರಿಯೆಂಟಲ್ ವೈದ್ಯಕೀಯ ಕ್ಷೇತ್ರಗಳ ಶಾಸ್ತ್ರೀಯ ಮತ್ತು ಸೈದ್ಧಾಂತಿಕ ಅಡಿಪಾಯಗಳ ಸಮಗ್ರ ತಿಳುವಳಿಕೆಯನ್ನು ನೀಡುತ್ತದೆ, ಇದು ಸಾಂವಿಧಾನಿಕ ಐದು ಅಂಶಗಳ ಅಕ್ಯುಪಂಕ್ಚರ್ ಸಂಪ್ರದಾಯ ಮತ್ತು ಎಂಟು ತತ್ವಗಳ ಚಿಕಿತ್ಸಾ ತಂತ್ರಗಳ ಮೇಲೆ ಕೇಂದ್ರೀಕರಿಸುತ್ತದೆ. ಅಕ್ಯುಪಂಕ್ಚರ್ ಮತ್ತು ಓರಿಯೆಂಟಲ್ ವೈದ್ಯಕೀಯ ಅಭ್ಯಾಸಕ್ಕೆ ಅಗತ್ಯವಿರುವಂತೆ ವಿದ್ಯಾರ್ಥಿಗಳನ್ನು ಸಮಗ್ರ ಮತ್ತು ಸಮಗ್ರ ದೃಷ್ಟಿಕೋನದಿಂದ ಬಯೋಮೆಡಿಸಿನ್‌ಗೆ ಪರಿಚಯಿಸುವ ಗುರಿಯನ್ನು ಹೊಂದಿದೆ.ಅಂತಹ ಸ್ನಾತಕೋತ್ತರ ಪದವೀಧರರನ್ನು ಅಕ್ಯುಪಂಕ್ಚರ್ ಸಲಹೆಗಾರರು, ಮಸಾಜ್ ಥೆರಪಿಸ್ಟ್‌ಗಳು, ಭೌತಚಿಕಿತ್ಸಕ ಸಹಾಯಕರು ಮತ್ತು ಸಹಾಯಕರು, ಕೈಯರ್ಪ್ರಾಕ್ಟರ್‌ಗಳು ಮತ್ತು ಆರೋಗ್ಯ ರಕ್ಷಣಾ ರೋಗನಿರ್ಣಯ ಮತ್ತು ಚಿಕಿತ್ಸೆ ನೀಡುವ ವೈದ್ಯರು ಮುಂತಾದ ಹುದ್ದೆಗಳಲ್ಲಿ ನೇಮಿಸಿಕೊಳ್ಳಲಾಗುತ್ತದೆ. ಆಸ್ಪತ್ರೆಗಳು, ವೈದ್ಯ ಅಭ್ಯಾಸಗಳು, ಸಮಗ್ರ ಆರೋಗ್ಯ ಚಿಕಿತ್ಸಾಲಯಗಳು, ಸಾರ್ವಜನಿಕ ಆರೋಗ್ಯ ಚಿಕಿತ್ಸಾಲಯಗಳು, ಕಾಲೇಜು ಆರೋಗ್ಯ ಕೇಂದ್ರಗಳು, ನೈಸರ್ಗಿಕ ಔಷಧ ವ್ಯಾಪಾರಿಗಳು ಸೇರಿದಂತೆ ಆರೋಗ್ಯ ರಕ್ಷಣೆಯಂತಹ ಕೈಗಾರಿಕೆಗಳಲ್ಲಿ ಮತ್ತು ಮಿಲಿಟರಿ ಪರಿಣತರನ್ನು ನೋಡಿಕೊಳ್ಳುವ ಸೆಟ್ಟಿಂಗ್‌ಗಳಲ್ಲಿ ಅವರನ್ನು ನೇಮಿಸಿಕೊಳ್ಳಲಾಗುತ್ತದೆ.

1ನೇ ಪುಟದಿಂದ....

ಜಂಟಿ ಅಧಿವೇಶನ ಪ್ರಾರಂಭವಾಗಲಿದೆ. ಅದಕ್ಕೂ ಮುನ್ನ ಜ.23 ರಿಂದ 25ರ ನಡುವೆ ಹಾಸನ ಹಾಗೂ ಬಾಗಲಕೋಟೆ ಭಾಗದಲ್ಲಿ ತಲಾ ಒಂದು ಪಕ್ಷದ ಸಮಾವೇಶ ನಡೆಸಲಾಗುವುದು. ಈ ಬಗ್ಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಮಾಜಿ ಸಚಿವ ಎಚ್.ಡಿ.ರೇವಣ್ಣ ಅವರಿಗೂ ಹೇಳಿದ್ದೇನೆ. ರಾಜ್ಯಸರ್ಕಾರದ ವೈಫಲ್ಯಗಳು ಕುಮಾರಸ್ವಾಮಿ ಆಡಳಿತಾವಧಿಯಲ್ಲಿ ಜಾರಿಗೊಳಿಸಿದ್ದ ಜನಪರ ಕಾರ್ಯಕ್ರಮಗಳನ್ನು ಮುಂದುವರೆಸದಿರುವುದರ ಬಗ್ಗೆ ಸಮಾವೇಶದಲ್ಲಿ ಪ್ರಸ್ತಾಪಿಸಲಾಗುವುದು ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಕಳೆದಿದ್ದು, ಹಾಸನ ಜಿಲ್ಲೆಯಲ್ಲಿ ಎರಡು ಸಮಾವೇಶಗಳನ್ನು ಮಾಡಿದ್ದಾರೆ. ದೇವೇಗೌಡರ ತವರು ಜಿಲ್ಲೆಯನ್ನು ಮುಗಿಸಬೇಕು ಎಂಬ ಉದ್ದೇಶವಿದೆಯೋ ಏನೋ ಗೊತ್ತಿಲ್ಲ ಎಂದು ಹೇಳಿದರು. ನನಗೆ ನಡೆಯಲು ಆಗುವುದಿಲ್ಲ, ಆದರೆ ಪ್ರವಾಸ ಮಾಡಲು ತೊಂದರೆಯಿಲ್ಲ. 60 ವರ್ಷಗಳ ರಾಜಕೀಯದಲ್ಲಿ ನಡೆದಿರುವ ವಿಚಾರಗಳ ಬಗ್ಗೆ ವಿಶ್ಲೇಷಣೆ ಮಾಡುವ ಶಕ್ತಿಯನ್ನು ಭಗವಂತ ಕೊಟ್ಟಿದ್ದಾರೆ. ಬಾಗಲಕೋಟೆ ಜಿಲ್ಲೆಯಲ್ಲಿ ನನ್ನ ಪ್ರತಿಮೆಯನ್ನು ನಿರ್ಮಾಣ ಮಾಡಿದ್ದು, ಅದನ್ನು ಅನಾವರಣ ಮಾಡುವ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದಾರೆ. ನಾನು ಹೋಗುತ್ತೇನೆ ಎಂದು ಹೇಳಿದರು. ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಜವರಾಯಿಗೌಡ, ವಿಧಾನಪರಿಷತ್ ಮಾಜಿ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿ, ಚೌಡರೆಡ್ಡಿ, ಪಕ್ಷದ ಮುಖಂಡರಾದ ರಮೇಶ್, ರೋಶನ್ ಅಬ್ಬಾಸ್ ಹಾಜರಿದ್ದರು.

# ಸನ್ ರೈಸ್ ಶಿಕ್ಷಣ ಸಂಸ್ಥೆಯಿಂದ ಪತ್ರಕರ್ತರ ಸಂಘಕ್ಕೆ ಆಯ್ಕೆಯಾದ ನೂತನ ಪದಾಧಿಕಾರಿಗಳಿಗೆ ಸನ್ಮಾನ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಪ್ರತಿಯೊಬ್ಬ ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ, ಸಮಯ ಪರಿಪಾಲನೆ, ಬಹಳ ಮುಖ್ಯ, ಜೊತೆಗೆ ಶ್ರದ್ಧೆಯಿಂದ ಓದಿದಾಗ ಮಾತ್ರ ಏನಾದರೊಂದು ಸಾಧಿಸಬಹುದು. ನೀವು ಅಭ್ಯಾಸ ಮಾಡುತ್ತಿರುವ ನರ್ಸಿಂಗ್, ಪ್ಯಾರಾಮೆಡಿಕಲ್, ಜಿಎನ್‌ಎಮ್, ಹೀಗೆ ಅನೇಕ ಕೋರ್ಸ್ ಗಳನ್ನು ಕಲಿತು ಅನೇಕ ಉದ್ಯೋಗ ಸೃಷ್ಟಿಸಿಕೊಳ್ಳಬಹುದು. ಈಗಾಗಲೇ ಈ ಸನ್ ರೈಸ್ ಕಾಲೇಜಿನಲ್ಲಿ ಓದಿದ ವಿದ್ಯಾರ್ಥಿಗಳು ಸುಮಾರು 350 ರಿಂದ 400 ವಿದ್ಯಾರ್ಥಿಗಳು ಆಸ್ಪತ್ರೆಯಲ್ಲಿ, ಮೆಡಿಕಲ್ ಶಾಪ್ ಗಳಲ್ಲಿ ಉದ್ಯೋಗದಲ್ಲಿ ತೊಡಗಿದ್ದಾರೆ ಎಂದು ಸಿಂಧನೂರು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಅಧ್ಯಕ್ಷರಾದ ಶರಣಪ್ಪ ಗೋನಾಳ ಹೇಳಿದರು.**

ನಗರದ ಸನ್ ರೈಸ್ ನರ್ಸಿಂಗ್ ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಘಟಕಕ್ಕೆ ಆಯ್ಕೆಯಾದ ಪದಾಧಿಕಾರಿಗಳಿಗೆ ಗೌರವ ಸನ್ಮಾನ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಮೊಬೈಲ್ ಈಗ ಪ್ರತಿಯೊಬ್ಬರಿಗೆ ಅವಶ್ಯಕ ಆದರೆ



ಅನವಶ್ಯಕ ಬಳಸದೆ ಉಪಯೋಗಕ್ಕೆ ಬಳಸಲು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ನಂತರ ಜಿಲ್ಲಾ ಉಪಾಧ್ಯಕ್ಷ ಅಶೋಕ ಬೆನ್ನೂರು ಮಾತನಾಡಿ, ಈ ಸನ್ ರೈಸ್ ಕಾಲೇಜಿನ ವಿಶೇಷ ಎಂದರೆ, ಎಲ್ಲಾ ಮಹನೀಯರ ದಿನಾಚರಣೆ, ಹಾಗೂ ಸಾಧಕರಿಗೆ ಗೌರವಿಸುವುದು ಪ್ರಾರಂಭದಿಂದಲೂ ಮಾಡಿಕೊಂಡು ಬಂದಿದ್ದಾರೆ. ಹೀಗಾಗಿ ಸನ್ ರೈಸ್ ಶಿಕ್ಷಣ ಸಂಸ್ಥೆ ಜಿಲ್ಲೆಯಾದ್ಯಂತ ಉತ್ತಮ ಹೆಸರು ಮಾಡಿದೆ. ಇದಕ್ಕೆ ಕಾರಣೀಕರ್ತರಾದ ಅಧ್ಯಕ್ಷ ಇರ್ಫಾನ್ ಕೆ, ಅತ್ತಾರ್ ಅವರ ಪರಿಶ್ರಮವೇ ಕಾರಣ ಎಂದರು.

ತದನಂತರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಖಜಾಂಚಿಯಾದ ಚಂದ್ರಶೇಖರ ಬೆನ್ನೂರು ಮಾತನಾಡಿ, ಬೆಳೆಯುವ ಸಿರಿ ಮೊಳಕೆಯಲ್ಲಿ ಅನ್ನುವ ಹಾಗೆ ವಿದ್ಯಾರ್ಥಿಗಳ ಜೀವನ ಉತ್ತಮವಾದದು. ಈ ಸಮಯವನ್ನು ವ್ಯರ್ಥಮಾಡದೆ ತುಂಬಾ ಶಿಸ್ತಿನಿಂದ ಓದಿ ಬದುಕನ್ನು ಕಟ್ಟಿಕೊಳ್ಳಬೇಕು. ಈ ಕಾಲೇಜಿಗೆ ಉತ್ತಮ ಹೆಸರಿದೆ. ಇಲ್ಲಿಂದ ಕಲಿತವರು ಉದ್ಯೋಗ ಹಿಡಿದು ಜೀವನ ರೂಪಿಸಿಕೊಂಡಿದ್ದಾರೆ. ಇವರು ನಡೆಸುವ ಪ್ರತಿಯೊಂದು ಕಾರ್ಯಕ್ರಮಗಳು ಬಹಳ ಅರ್ಥಪೂರ್ಣವಾಗುವಂತಹ ಕಾರ್ಯಕ್ರಮಗಳೇ ಇದರಿಂದ ವಿದ್ಯಾರ್ಥಿಗಳಿಗೂ ಅನುಕೂಲ ಎಂದರು.

ಸನ್ ರೈಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಇರ್ಫಾನ್ ಕೆ ಅತ್ತಾರ್ ಮಾತನಾಡಿ, ಸಮಾಜದ ಅಂಕುಡೊಂಕು ತಿದ್ದಿ ಸರಿದಾರಿಯಲ್ಲಿ ನಡೆಯುವಂತೆ ಮಾಡುತ್ತಿರುವುದು ಮಾಧ್ಯಮದ ಪತ್ರಕರ್ತರು. ಅವರು ಯಾವುದೇ ಫಲಪೇಕ್ಷೆ ಬಯಸದೆ, ಸಮಾಜವನ್ನು ತಿದ್ದುವ ಕೆಲಸ ಮಾಡುತ್ತಿದ್ದಾರೆ, ಜೊತೆಗೆ ಇದೊಂದು ಸಮಾಜ ಸೇವೆ ಎಂದು ಭಾವಿಸಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಂದು ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ನೂತನವಾಗಿ ಪದಾಧಿಕಾರಿಗಳಾಗಿ ಆಯ್ಕೆಗೊಂಡು ಸನ್ಮಾನಕ್ಕೆ ಅರ್ಹರಾಗಿದ್ದಾರೆ. ಜವಾಬ್ದಾರಿ ಸ್ಥಾನದಲ್ಲಿ ಇರುವ ಅವರನ್ನು ಸನ್ಮಾನಿಸಿ ಗೌರವಿಸುವುದು ನಮ್ಮ ಆದ್ಯ ಕರ್ತವ್ಯ ಎಂದರು.


ಸನ್ ರೈಸ್ ನರ್ಸಿಂಗ್ ಕಾಲೇಜು ಪ್ರಿನ್ಸಿಪಾಲ್ ಲಾಜರ್ ಸಿರಿಲ್ ಕಾರ್ಯಕ್ರಮವನ್ನು ನಿರೂಪಿಸಿದರು. ಇದೇ ವೇಳೆ ಜಿಲ್ಲಾ ಉಪಾಧ್ಯಕ್ಷ ಅಶೋಕ ಬೆನ್ನೂರು, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾದ ಚಂದ್ರಶೇಖರ್ ಯರದಿಹಾಳ, ತಾಲೂಕು ಅಧ್ಯಕ್ಷರಾದ ಶರಣಪ್ಪ ಗೋನಾಳ, ಪ್ರಧಾನ ಕಾರ್ಯದರ್ಶಿ ಅಮರೇಶ ಅಲಬನೂರು, ಉಪಾಧ್ಯಕ್ಷರಾದ ಯಮನಪ್ಪ ಪವಾರ್, ದುರುಗೇಶ, ಖಜಾಂಚಿ ಚಂದ್ರಶೇಖರ ಬೆನ್ನೂರು, ಕಾರ್ಯಕಾರಿ ಮಂಡಳಿ ಸದಸ್ಯರಾದ ವೀರೇಶ ಗಡ್ಡಿಮಾಳ, ಚನ್ನಬಸವ ಕಟ್ಟಿಮನಿ, ಇವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ: ಕಾರ್ಯದರ್ಶಿ ಇರ್ಷಾಧ್ ಕೆ, ಅತ್ತಾರ್, ಪ್ಯಾರಾಮೆಡಿಕಲ್ ಪ್ರಿನ್ಸಿಪಾಲ್ ಚಕ್ರವರ್ತಿ, ಫಾರ್ಮಸಿ ಪ್ರಿನ್ಸಿಪಾಲ್ ವಸೀಂ ಹುಸೇನ್, ಉಪನ್ಯಾಸಕರಾದ ಆಶುಪಾಷಾ, ರಾಜೇಶ, ಚೈತ್ರಾ, ಮನೋಹರ್, ಆಶೀಫ್, ಸೇರಿದಂತೆ ಎಲ್ಲಾ ವಿಭಾಗದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಡಿ.27ಕ್ಕೆ ಬಸವ ಗೀತೆ ಸತ್ಯ ಸಂವಾದ 9 ಸಂಪುಟಗಳ ಗುಚ್ಚ ಗ್ರಂಥ ಲೋಕಾರ್ಪಣೆ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಬಿ.ವಿ.ಆರ್ ಇ–ಟೆಕ್ನೋ ಸ್ಕೂಲ್ ಆವರಣದಲ್ಲಿ ಡಿಸೆಂಬರ್ 27ರಂದು ಸಂಜೆ 5 ಗಂಟೆಗೆ ಶ್ರೀ ಬಸವ ಸೇವಾ ಪ್ರತಿಷ್ಠಾನ ಹಾಗೂ ಸುದ್ದಿಮೂಲ ದಿನಪತ್ರಿಕೆ ರಾಯಚೂರು, ಬಸವ ಕೇಂದ್ರ ಮಾನ್ವಿ, ಶರಣ ಸಾಹಿತ್ಯ ಪರಿಷತ್ತು ಮಾನ್ವಿ, ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು, ತಾಲೂಕಾ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಇವರ ಸಂಯುಕ್ತ ಆಶ್ರಯದಲ್ಲಿ ಸುದ್ದಿಮೂಲ ಸಂಪಾದಕರಾದ ಶ್ರೀ ಬಸವರಾಜಸ್ವಾಮಿ ರವರ ರಚನೆಯಾದ ಬಸವ ಗೀತೆ ಸತ್ಯ ಸಂವಾದ 9 ಸಂಪುಟಗಳ ಗುಚ್ಚ ಗ್ರಂಥಗಳ ಲೋಕಾರ್ಪಣೆ ಕಾರ್ಯಕ್ರಮ ಆಯೋಜಿಸಲಾಗಿದೆ.**




ಕಾರ್ಯಕ್ರಮವನ್ನು ನಿವೃತ್ತ ಶಿಕ್ಷಣಾಧಿಕಾರಿಗಳಾದ ಡಿ.ಜಿ.ಕರ್ಕಿಹಳ್ಳಿ ಅವರು ಉದ್ಘಾಟಿಸಲಿದ್ದು, ನಿವೃತ್ತ ಉಪನ್ಯಾಸಕರಾದ ಬಿ.ಜಿ.ಹುಲಿ ಅವರು ಗ್ರಂಥ ಲೋಕಾರ್ಪಣೆ ಹಾಗೂ ಪುಸ್ತಕದ ಕುರಿತು ಅನಿಸಿಕೆ ವ್ಯಕ್ತಪಡಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಸವ ಕೇಂದ್ರದ ಗೌರವಾಧ್ಯಕ್ಷರಾದ ಡಾ. ಬಸವಪ್ರಭು ಪಾಟೀಲ್ ಬೆಟ್ಟದೂರು ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕೃತಿಯ ಲೇಖಕರಾದ ಸುದ್ದಿಮೂಲ ಪತ್ರಿಕೆಯ ಸಂಪಾದಕ ಬಸವರಾಜಸ್ವಾಮಿ, ಬಿ.ವಿ.ಆರ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಿ.ವಿ.ರೆಡ್ಡಿ, ಬಸವ ಕೇಂದ್ರದ ತಾಲೂಕಾ ಅಧ್ಯಕ್ಷ ಜಿ.ಎಂ. ರಂಗಪ್ಪ ಮೇದಾ, ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಇ. ನರಸಿಂಹ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕಾ ಅಧ್ಯಕ್ಷ ಶರಣಬಸವ ನೀರಮಾನ್ವಿ, ತಾಲೂಕಾ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ರಾಜಾ ಸುಭಾಷ್ಚಂದ್ರ ನಾಯಕ, ಹೆಚ್. ಶರ್ಫುದ್ದೀನ್ ಪೋತ್ನಾಳ್, ಮೂಕಪ್ಪ ಕಟ್ಟಿಮನಿ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಸಾಹಿತ್ಯಾಸಕ್ತರು, ಬಸವ ಚಿಂತಕರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ತಾಲೂಕಾ ಸುದ್ದಿಮೂಲ ವರದಿಗಾರರಾದ ಪಿ. ಪರಮೇಶ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಮಾನವಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ದತ್ತಿ ಉಪನ್ಯಾಸ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಬಾಲಕಿಯರ ಸರ್ಕಾರಿ ಪಿ.ಯು. ಕಾಲೇಜ್ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ನಡೆದ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಹಿರಿಯ ಮುಖಂಡರಾದ ಬಾಲಸ್ವಾಮಿ ಕೊಡ್ಲಿ ಉದ್ಘಾಟಿಸಿ ಮಾತನಾಡಿ ಕನ್ನಡ ಸಾಹಿತ್ಯ ಪರಿಷತ್ತು ರಾಜ್ಯದಲ್ಲಿನ ಸಾಹಿತಿಗಳನ್ನು,ಸಾಹಿತ್ಯ ಪ್ರಕರಗಳನ್ನು ಜನರಿಗೆ ಪರಿಚಯಿಸುವುದರ ಜೋತೆಗೆ ನಾಡು ,ನುಡಿ,ಜಲ,ಬಾಷೆ ರಕ್ಷಣೆಯ ವಿಚಾರದಲ್ಲಿ ಸಾದ ಮುಂಚುಣಿಯಲ್ಲಿದ್ದು ಹೋರಾಟ ನಡೆಸುತ್ತ ಬಂದಿದೆ ನಮ್ಮ ರಾಜ್ಯದಲ್ಲಿ ಅನೇಕ ರಾಜ್ಯಗಳಿಂದ ಬಂದಿರುವ ಬಹುಬಾಷಿಕರನ್ನು ಕೂಡ ಸೌಹಾರ್ಧಯುತವಾಗಿ ಬದುಕುವುದಕ್ಕೆ ಅವಕಾಶ ನೀಡುವ ಮೂಲಕ ನಮ್ಮ ಕನ್ನಡಿಗರು ಸೌಹಾರ್ದತೆಗೆ ಹೆಸರಾಗಿದ್ದಾರೆ.**

ಮುಂದಿನ ದಿನಗಳಲ್ಲಿ ಕ.ಸಾ.ಪ. ತಾಲೂಕು ಘಟಕವು ಗ್ರಾಮೀಣ ಭಾಗದಲ್ಲಿನ ಜನಪದರ ಸಾಹಿತ್ಯವನ್ನು ಜನಪದರನ್ನು ಪರಿಚಯಿಸುವ ಕಾರ್ಯವನ್ನು ಮಾಡಬೇಕು ಎಂದು ಕರೆ ನೀಡಿದರು. ಕ.ಸಾ.ಪ. ತಾಲೂಕು ಅಧ್ಯಕ್ಷರಾದ ಶರಣಬಸವ



ನೀರಮಾನ್ವಿ ಮಾತನಾಡಿ ಕನ್ನಡ ಸಾಹಿತ್ಯ ಪರಿಷತ್ತು ಹಲವಾರು ದತ್ತಿ ದಾನಿಗಳಿಂದ ದತ್ತಿಯನ್ನು ಪಡೆದು ಶಾಲಾ ವಿದ್ಯಾರ್ಥಿಗಳಿಗೆ ಕನ್ನಡ ಸಾಹಿತಿಗಳನ್ನು ಹಾಗೂ ಕನ್ನಡ ಸಾಹಿತ್ಯವನ್ನು ಪರಿಚಯಿಸುವ ಕಾರ್ಯವನ್ನು ಮಾಡುತ್ತಿದೆ. ನಮ್ಮ ಬದುಕಿನ ಬಾಷೆ ಮಾತೃಬಾಷೆ ಕನ್ನಡಕ್ಕೆ ಇಂದು ಹೆಚ್ಚಿನ ಅದ್ಯತೆಯನ್ನು ನೀಡಬೇಕಾಗಿದೆ ಅಂಗ್ಲ ಮಾಧ್ಯಮ ಶಿಕ್ಷಣ ನಮ್ಮ ವೃತ್ತಿಗೆ ಅನುಕೂಲವಾದರು ಕೂಡ ನಮ್ಮ ಮಾತೃಬಾಷೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ ಎಂದು ತಿಳಿಸಿದರು.

ದಿ.ದ್ಯಾಸನೂರು ತಿಪ್ಪಣ್ಣಶೆಟ್ಟಿ, ದಿ.ಕು, ಸೌಮ್ಯ ದ್ಯಾಸನೂರು ಮಾನ್ವಿ ಸ್ಮಾರಕ ದತ್ತಿಗಳಾದ ಶಿಕ್ಷಣ ಮತ್ತು ಸ್ವಾತಂತ್ರ,ಶಿಕ್ಷಣ ಅಂದು ಮತ್ತು ಇಂದು ವಿಷಯ ಕುರಿತು.ನಿವೃತ್ತ ಕನ್ನಡ ಉಪನ್ಯಾಸಕರಾದ ರೇವಣಸಿದ್ದಯ್ಯ ಹಿರೇಮಠ ಉಪನ್ಯಾಸ ನೀಡಿ ವ್ಯಕ್ತಿಯನ್ನು ಪರಿಪೂರ್ಣವಾಗಿಸುವಲ್ಲಿ ಶಿಕ್ಷಣ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಒಬ್ಬ ವ್ಯಕ್ತಿ ಶಿಕ್ಷಣದಿಂದ ಮಾತ್ರ ಉನ್ನತವಾದ ಜೀವನವನ್ನು ಕಟ್ಟಿಕೊಳ್ಳುವುದಕ್ಕೆ ಪರಿಪೂರ್ಣವಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದಕ್ಕೆ ಸಾಧ್ಯವಿದೆ ಇಂದಿನ ಅಧುನಿಕ ಜಗತ್ತಿನಲ್ಲಿ ಪ್ರತಿಯೊಬ್ಬರಿಗೂ ಕೂಡ ತಮ್ಮ ಆಯ್ಕೆಯ ವಿಷಯದಲ್ಲಿ ಶಿಕ್ಷಣವನ್ನು ಪಡೆದುಕೊಳ್ಳುವುದಕ್ಕೆ ಅನೇಕ ಅವಕಾಶವಿದೆ ಶಿಕ್ಷಣದಿಂದ ಮಾತ್ರ ಜ್ಞಾನವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ದತ್ತಿ ದಾನಿಗಳಾದ ದ್ಯಾಸನೂರುರಾಮಚಂದ್ರಶೆಟ್ಟಿ, ಉಪನ್ಯಾಸಕರಾದ ಸೈಯಾದ್ ಮಿನಾಜ್ ಉಲ್ ಹಸನ್ ,ಕಾ,ನಿ.ಪ. ತಾಲೂಕು ಅಧ್ಯಕ್ಷರಾದ ಅಶೋಕ ತಡಕಲ್ ರವರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯರಾದ ನಾಗಮಲ್ಲೇಶ, ಹಿರಿಯ ಮುಖಂಡರಾದ ಜಿ,ನಾಗರಾಜ ,ಮಹಿಮೂದಾಬೇಗಂ, ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ಹಣಪಣ್ಣ ಚಂಡೂರು,ರವಿಶರ್ಮ,ಲಕ್ಷ ?ಮಣ ಜಾನೇಕಲ್ ,ಚನ್ನಬಸವ ಮಾಡಗೀರಿ ಉಪನ್ಯಾಸಕರು, ಹನುಮಂತ ಕೋಟೆ, ಸೇರಿದಂತೆ ಇನ್ನಿತರರು ಇದ್ದರು.

# ತಾಲೂಕ ಮಟ್ಟದ ಅಧಿಕಾರಿಗಳ ತ್ರೈಮಾಸಿಕ ಕೆ ಡಿ ಪಿ ಸಭೆ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಮುದ್ದೇಬಿಹಾಳ ಮತಕ್ಷೇತ್ರದ ತ್ರೈಮಾಸಿಕ ಕೆಡಿಪಿ ಸಭೆಯು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ, ಶಾಸಕ ಸಿ.ಎಸ್.ನಾಡಗೌಡ (ಅಪ್ಪಾಜಿ) ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆಯಿತು.**

ವಿವಿದಲಾಖೆಗಳ ಪ್ರಗತಿ ಪರಿಶೀಲನೆ ಮಾಡಿ ಮಾತನಾಡಿದವರು ಸರ್ಕಾರದ ನಿರ್ದೇಶನ ಹಾಗೂ ಮಾರ್ಗಸೂಚಿಗಳಂತೆ ಎಲ್ಲ ಅಧಿಕಾರಿಗಳು ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು. ಇಲಾಖಾವಾರು ವಹಿಸಿದ ಜವಾಬ್ದಾರಿಗಳನ್ನು ನಿರ್ವಹಿಸಿ ಜನಸ್ನೇಹಿ ಅಧಿಕಾರ ಹೊಂದಬೇಕು. ಎಂದು ಹೇಳಿದರು ಸಾರ್ವಜನಿಕರ ಕುಂದು–ಕೊರತೆ, ಸಮಸ್ಯೆಗಳಿಗೆ ನ್ಯಾಯಸಮ್ಮತ ಪರಿಹಾರ ಹುಡುಕಿ ಸುಧಾರಣೆ ಕ್ರಮ




ಕೈಗೊಂಡು ಕ್ಷೇತ್ರದ ಪ್ರಗತಿಗೆ ಬದ್ಧರಾಗಬೇಕು. ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮಗಳ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಲು ಸುಧಾರಿತ ಕ್ರಮ ಕೈಗೊಳ್ಳಬೇಕು. ಆರೋಗ್ಯ, ಸ್ವಚ್ಛತೆ, ಕುಡಿಯುವ ನೀರು, ವಿದ್ಯುತ್ ಹಾಗೂ ಮೂಲಸೌಲಭ್ಯಗಳನ್ನು ನೀಡುವಲ್ಲಿ ನಿಗಧಿತ ಯೋಜನೆಗಳನ್ನು ರೂಪಿಸಬೇಕು.

ಅಧಿಕಾರಿಗಳು ಸಕ್ರಿಯವಾಗಿ ಕೆಲಸ ಮಾಡಿ ಮತಕ್ಷೇತ್ರದ ಜನರಿಗೆ ಸರ್ಕಾರದ ಸೌಲಭ್ಯಗಳನ್ನು ಮುಟ್ಟಿಸಿ ಎಂದರು. ಕೃಷಿ, ತೋಟಗಾರಿಕೆ ಇಲಾಖೆಯಲ್ಲಿ ರೈತರಿಗೆ ಲಭ್ಯವಾಗುವ ಬೀಜ, ರಸಗೊಬ್ಬರ, ಔಷಧಗಳ ಸಂಗ್ರಹ ಮತ್ತು ವಿತರಣೆ ಬಗ್ಗೆ ಮಾಹಿತಿ ಪಡೆದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತ, ಮೊರಾರ್ಜಿ ದೇಸಾಯಿ ಹಾಗೂ ಸಮಾಜ ಕಲ್ಯಾಣ ಇಲಾಖೆಗಳ ಬಗ್ಗೆ ಚರ್ಚಿಸಿದ ಮಾನ್ಯರು, ವಸತಿ ನಿಲಯಗಳ ಪ್ರವೇಶಾತಿ, ಮಕ್ಕಳ ಹಾಜರಾತಿ ಕುರಿತು ಪರಿಶೀಲಿಸಿದರು. ಮಕ್ಕಳಿಗೆ ಸಕಾಲದಲ್ಲಿ ಊಟ–ಉಪಹಾರ ವಿತರಿಸಬೇಕು. ಶೇ.100 ಫಲಿತಾಂಶ ಹೊಂದಲು ಶೈಕ್ಷಣಿಕ ಕ್ರಮ ಕೈಗೊಳ್ಳಿ. ಹೊಸ ವಸತಿ ನಿಲಯಗಳಿಗೆ ಜಾಗ ಮಂಜೂರಾತಿ ನೀಡಲು ಪುರಸಭೆ ಮುಖ್ಯಾಧಿಕಾರಿಗಳಿಗೆ ಸೂಚಿಸಿದರು.

ವಿವಿಧ ಇಲಾಖೆಗಳ ಪ್ರಗತಿ ಕುರಿತು ಮಾನ್ಯ ಶಾಸಕರು ಅಧಿಕಾರಿಗಳೊಂದಿಗೆ ಚರ್ಚಿಸಿದರು. ಮುದ್ದೇಬಿಹಾಳ ಹಾಗೂ ತಾಳಿಕೋಟೆ ತಾಲ್ಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು, ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಸಭೆಗೆ ಹಾಜರಾಗಿ ಪ್ರಗತಿ ವರದಿಯನ್ನು ಮಂಡಿಸಿದರು. ಜಿಲ್ಲಾ ಪಂಚಾಯತಿ ಮುಖ್ಯ ಲೆಕ್ಕಾಧಿಕಾರಿ ರಾಮಣ್ಣ ಅಥಣಿ, ತಾಳಿಕೋಟೆ ತಾ.ಪಂ. ಇಓ ಅನುಸೂಯಾ ಚಲವಾದಿ, ಮುದ್ದೇಬಿಹಾಳ ತಾ.ಪಂ. ಇಓ ವೆಂಕಟೇಶ ವಂದಾಲ ತಹಶೀಲ್ದಾರರಾದ ಕೀರ್ತಿ ಚಾಲಕ ಮತ್ತು ಡಾ.ವಿನಯಾ ಹೂಗಾರ, ಬಿಇಓ ಬಿ.ಎಸ್.ಸಾವಳಗಿ, ಸಿಪಿಐ, ತಾಲ್ಲೂಕಾ ಆರೋಗ್ಯಾಧಿಕಾರಿ, ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ ಸೇರಿದಂತೆ ತಾಲ್ಲೂಕಿನ ವಿವಿದ ಇಲಾಖೆಗಳ ಅಧಿಕಾರಿಗಳಿದ್ದರು.